# ಕೋಮು ಸಮಸ್ಯೆಯ ಕುರಿತು

**ಶಿವದಾಸ್ ಘೋಷ್**

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ
(ಕಮ್ಯುನಿಸ್ಟ್)
ಕರ್ನಾಟಕ ರಾಜ್ಯ ಸಮಿತಿ

**'Komu Samasyeya Kurithu'** is a Kannada translation of the English booklet - 'On Communal Problem' written by Comrade Shibdas Ghosh

Published by:
**K.Radhakrishna**
On behalf of SUCI-C, Karnataka State Committee,
No.31, 3rd Cross, Malleswaram, Bangalore-560 003
Ph: 080-23561443
Website: www.suci-c.in
e-mail: karmika.drushtikona@gmail.com

**ಬೆಲೆ : ರೂ. 20/–**

ಮೂರನೇ ಮುದ್ರಣ : ಜನವರಿ 1, 2014

**ಮುದ್ರಣ:**
**ವಿಘ್ನೇಶ್ವರ ಪ್ರಿಂಟರ್ಸ್,**
**ನಂ.159, ಜಿ.ಬಿ.ಲೇನ್,**
**ಕಾಟನ್ ಪೇಟ್, ಬೆಂಗಳೂರು–53**

# ಪ್ರಕಾಶಕರ ನುಡಿ

ನವೆಂಬರ್, 1964ರಲ್ಲಿ ದೆಹಲಿಯಲ್ಲಿ "ಕೋಮುಸೌಹಾರ್ದತೆಯ ಕುರಿತು ಪ್ರಜಾತಾಂತ್ರಿಕ ಸಮಾವೇಶ" ಜರುಗಿತ್ತು. ನಮ್ಮ ನಲ್ಮೆಯ ನಾಯಕರು, ಶಿಕ್ಷಕರು ಮತ್ತು ಈ ಯುಗದ ಓರ್ವ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರೂ ಆದ ಕಾಮ್ರೇಡ್ ಶಿವದಾಸ್ ಘೋಷ್‌ರವರನ್ನು ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಆಹ್ವಾನಿಸಲಾಗಿತ್ತು. ಕಾರಣಾಂತರಗಳಿಂದ ಅವರು ಈ ಸಮಾವೇಶಕ್ಕೆ ಹಾಜರಾಗುವುದು ಸಾಧ್ಯವಾಗದೆ ಹೋಗಿದ್ದಕ್ಕಾಗಿ ಅವರು ಸಮಾವೇಶದ ಪ್ರತಿನಿಧಿಗಳನ್ನುದ್ದೇಶಿಸಿ ಈ ಪತ್ರವನ್ನು ಕಳುಹಿಸಿದರು.

ಕೋಮು ಸಮಸ್ಯೆಯ ಎಲ್ಲಾ ವಿಷಯಾಂಶಗಳಿಗೆ ಗಹನವಾದ ಚರ್ಚೆಯ ಅವಶ್ಯಕತೆಯಿದೆ. ಆದಾಗ್ಯೂ ಈ ಕಿರು ಹೊತ್ತಿಗೆ, ಕೋಮುವಾದಿ ಸಮಸ್ಯೆಗಳು, ಅವುಗಳ ಕಾರಣಗಳು ಮತ್ತು ಈ ಅನಿಷ್ಟವನ್ನು ಸಮಾಜದಿಂದ ನಿರ್ಮೂಲನೆಗೊಳಿಸಲು ಅಗತ್ಯವಾದ ವೈಜ್ಞಾನಿಕ ದೃಷ್ಟಿಕೋನವನ್ನು ಜನರಿಗೆ ಒದಗಿಸುವಲ್ಲಿ ಖಂಡಿತವಾಗಿ ಸಹಾಯಕವಾಗುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ದೇಶದಾದ್ಯಂತ ಹರಡುತ್ತಿರುವ ಕೋಮು ಗಲಭೆಗಳು ಈಗಾಗಲೇ ನೂರಾರು ಜೀವಗಳನ್ನು ಆಹುತಿ ತೆಗೆದುಕೊಂಡಿವೆ. ದೇಶದಾದ್ಯಂತ ಭಯೋತ್ಪಾದಕ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ. ತತ್ಪರಿಣಾಮವಾಗಿ ಅತ್ಯಂತ ಹಾನಿಗೆ ಒಳಪಟ್ಟಿರುವುದು ದೇಶದ ಶೋಷಿತ, ಮರ್ದಿತ ಜನರ ಐಕ್ಯತೆ ಹಾಗೂ ಐಕ್ಯ ಆಂದೋಳನ.

ಈ ಸಂದರ್ಭದಲ್ಲಿ ಅಗಲಿದ ನಾಯಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಈ ಲೇಖನವನ್ನು ಕನ್ನಡದಲ್ಲಿ ಪ್ರಕಟಿಸುವುದು ಸಮಯೋಚಿತವೆಂದು ನಮ್ಮ ಪಕ್ಷ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ದ ಕರ್ನಾಟಕ ರಾಜ್ಯ ಸಮಿತಿ ಭಾವಿಸುತ್ತಿದೆ. ಇಂಗ್ಲೀಷ್ ಮತ್ತಿತರ ಹಲವು ಭಾಷೆಗಳಲ್ಲಿ ಅನೇಕ ಅವೃತ್ತಿಗಳನ್ನು ಕಂಡ ಈ ಪುಸ್ತಕದ ಮೂರನೆಯ ಆವೃತ್ತಿಯನ್ನು ಕನ್ನಡದಲ್ಲಿ ಪ್ರಕಟಿಸುತ್ತಿದ್ದೇವೆ. ಅನುವಾದದಲ್ಲಿ ಏನೇ ತಪ್ಪುಗಳು ಕಂಡು ಬಂದರೂ ಅದರ ಹೊಣೆ ಅನುವಾದಕರಿಗೆ ಸೇರಿದ್ದು.

ಜನವರಿ 1, 2014
ನಂ.31, 3ನೇ ಅಡ್ಡರಸ್ತೆ,
ಮಲ್ಲೇಶ್ವರಂ,
ಬೆಂಗಳೂರು–560003

**ಕೆ.ರಾಧಾಕೃಷ್ಣ**
ರಾಜ್ಯ ಕಾರ್ಯದರ್ಶಿ,
ಎಸ್‌ಯುಸಿಐ (ಸಿ)

# ಕೋಮು ಸಮಸ್ಯೆಯ ಕುರಿತು

**ಆತ್ಮೀಯ ಮಿತ್ರರೇ ಹಾಗೂ ಸೋದರ ಪ್ರತಿನಿಧಿಗಳೇ,**

ನಿಮ್ಮ ಪ್ರಜಾತಾಂತ್ರಿಕ ಸಮಾವೇಶಕ್ಕೆ ನನ್ನನ್ನೂ ಓರ್ವ ಪ್ರತಿನಿಧಿಯನ್ನಾಗಿ ಚುನಾಯಿಸಿದ್ದಕ್ಕಾಗಿ ನಿಮಗೆ ಧನ್ಯವಾದಗಳು. ಈ ಸಮಾವೇಶದ ಘೋಷಿತ ಉದ್ದೇಶವನ್ನು ಎಂದರೆ, ಭಾರತದಲ್ಲಿ ವಾಸಿಸುತ್ತಿರುವ ವಿಭಿನ್ನ ಕೋಮುಗಳ ನಡುವಣ ಶಾಂತಿ ಸೌಹಾರ್ದತೆಗಳನ್ನು ಕಾಪಾಡುವ ಸಲುವಾಗಿ ಕೋಮುವಾದವನ್ನು ಹೋರಾಡುವ ಉದ್ದೇಶವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಸಮಾವೇಶದಲ್ಲಿ ನಾನೇ ಸ್ವತಃ ಹಾಜರಿದ್ದು, ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದು ಸಾಧ್ಯವಿದ್ದಿದ್ದರೆ ಅದು ನನಗೆ ಸಂತೋಷದಾಯಕವಾಗುತ್ತಿತ್ತು. ಆದರೆ ನಾನು ಬೇರೆಡೆ ಕಾರ್ಯಮಗ್ನನಾಗಿರುವುದರಿಂದ ಈ ಸಮಾವೇಶದಲ್ಲಿ ಸ್ವತಃ ಭಾಗವಹಿಸಲು ನನಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಮ್ಮ ದೇಶದ ಕೋಮು ಸಮಸ್ಯೆಯ ಕುರಿತಾದ ನನ್ನ ವಿಚಾರಗಳನ್ನು ನಿಮ್ಮ ಪರಿಗಣನೆಗಾಗಿ ಕಳುಹಿಸುವ ಸ್ವಾತಂತ್ರ್ಯವನ್ನು ತೆಗೆದುಕೊಳ್ಳುತ್ತೇನೆ. ಈ ಮೂಲಕ ನನ್ನ ಪರವಾಗಿಯೂ ಹಾಗೂ ನಮ್ಮ ಪಕ್ಷವಾದ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ಪರವಾಗಿಯೂ ಈ ಪ್ರಜಾತಾಂತ್ರಿಕ ಸಮಾವೇಶಕ್ಕೆ ಸೋದರ ಶುಭಾಕಾಂಕ್ಷೆಗಳನ್ನು ಅರುಹುತ್ತಾ, ಅದು ಅತ್ಯಂತ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಸ್ನೇಹಿತರೇ, ವಿಷಯಗಳನ್ನು ಕಲಸುಮೇಲೋಗರ ಮಾಡುವುದು ಒಳಿತಲ್ಲ. ನಮ್ಮ ಜನತೆಯ ಹಿತಾಸಕ್ತಿಯು, ಅಪಾಯಕಾರಿ ಸಾಮಾಜಿಕ ವ್ಯಾಧಿಯಾದ ಕೋಮು ಹಿಂಸಾಚಾರದ ಕಾರಣಗಳ ಗಾಢ ವೈಜ್ಞಾನಿಕ ಪರಿಶೋಧನೆಯನ್ನು ಹಾಗೂ ಅದರ ಸೂಕ್ತ ಪರಿಹಾರಗಳ ಸ್ವೀಕಾರವನ್ನು ಬಯಸುತ್ತದೆ. ಈ ಪ್ರಜಾತಾಂತ್ರಿಕ ಸಮಾವೇಶವು, ಬರಿಯ ಕೋಮುವಾದ ಹಾಗೂ ತತ್ಸಂಬಂಧಿ ಅನಿಷ್ಟಗಳನ್ನು ಖಂಡಿಸುತ್ತಾ ಹಾಗೂ ಕೋಮು ಶಾಂತಿ ಸಾಮರಸ್ಯಗಳನ್ನು ಕಾಪಾಡುವ ಕುರಿತು ಸಾತ್ವಿಕ ಆಶಯಗಳನ್ನು ವ್ಯಕ್ತಪಡಿಸುತ್ತಾ ತನ್ನ ಕರ್ತವ್ಯವನ್ನು ಮುಗಿಸುವುದಾದರೆ ಅದು ತನ್ನ ಘೋಷಿತ ಉದ್ದೇಶವನ್ನು ತಲುಪಲು ವಿಫಲವಾಗುತ್ತದೆ. ಏಕೆಂದರೆ ಕೋಮುವಾದವನ್ನು ಖಂಡಿಸುವ ಹಾಗೂ ವಿಭಿನ್ನ ಕೋಮುಗಳ ನಡುವಣ ಶಾಂತಿ ಸೌಹಾರ್ದತೆಗಳ ಸದ್ಗುಣಗಳನ್ನು ಕೊಂಡಾಡುವ ಪ್ರವಚನಗಳಿಂದ ಕೋಮುವಾದ ಹಾಗೂ ಕೋಮುಹಿಂಸಾಚಾರದ ಸಮಸ್ಯೆಯನ್ನು ಬಗೆಹರಿಸಬಹುದಾಗಿದ್ದರೆ, ನಮ್ಮ ದೇಶದಲ್ಲಿ ಆ ಸಮಸ್ಯೆಯು ತುಂಬ ಹಿಂದೆಯೇ ಬಗೆಹರಿಸಲ್ಪಟ್ಟಿರುತ್ತಿತ್ತು. ಭಾರತದ ವಿಶಾಲ ಜನಸ್ತೋಮದ ಪ್ರಶ್ನಾತೀತ ವಿಶ್ವಾಸವನ್ನು ಪಡೆದಿದ್ದ ಮಹಾನ್ ವ್ಯಕ್ತಿಗಳಾದ ದೇಶಬಂಧು ಚಿತ್ತರಂಜನ್, ಮಹಾತ್ಮಗಾಂಧಿ ಹಾಗೂ ನೇತಾಜಿ ಸುಭಾಶಚಂದ್ರ, ಇವರೆಲ್ಲರೂ ಕೋಮುವಾದ ಹಾಗೂ ಕೋಮು ಹಿಂಸಾಚಾರವನ್ನು ಸಮಾನವಾಗಿ ಖಂಡಿಸಿ, ಇಲ್ಲಿ ವಾಸಿಸುವ ವಿಭಿನ್ನ ಕೋಮುಗಳ ನಡುವಣ ಶಾಂತಿ ಹಾಗೂ ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕಾಗಿರುವುದರ

ಅವಶ್ಯಕತೆಯನ್ನು ಉದ್ಘೋಷಿಸಲಿಲ್ಲವೇ? ಆ ಎಲ್ಲಾ ವೇದಿಕೆಯ ಭಾಷಣಗಳ ಒಟ್ಟಾರೆ ಫಲಿತಾಂಶ ಏನಾಗಿದೆ? ಅವರ ಕಾಲಕ್ಕೆ ಹೋಲಿಸಿದರೆ ನಮ್ಮ ಗುರಿಯೆಡೆಗೆ ನಾವು ಒಂದಂಗುಲವೂ ಸನಿಹವಾಗಿಲ್ಲ. ಮುಂಚಿನಂತೆಯೇ, ಅತ್ಯಲ್ಪ ಪ್ರಚೋದನೆಯಿಂದಲೆ ಕೋಮು ಉನ್ಮಾದ ಹಾಗೂ ಕೋಮು ಹಿಂಸಾಚಾರಗಳ ಅತ್ಯಂತ ಕರಾಳ ರೂಪದಲ್ಲಿ ತನ್ನನ್ನೇ ವ್ಯಕ್ತಪಡಿಸಿಕೊಳ್ಳುತ್ತಾ ಕೋಮುವಾದವು, ನಮ್ಮ ಜನತೆಯ ಮೇಲೆ ತನ್ನ ಮಾರಕಪ್ರಭಾವದೊಂದಿಗೆ ಇನ್ನೂ ಉಳಿದಿದೆ. ನಮ್ಮ ದೇಶದಲ್ಲಿ ಕೋಮುವಾದೀ ಸಮಸ್ಯೆಯನ್ನು ಪರಿಹರಿಸುವಲ್ಲಿ ಈ ನಾಯಕರ ವೈಫಲ್ಯದ ಕಾರಣ, ಅದನ್ನು ಪರಿಹರಿಸುವುದರಲ್ಲಿ ಅವರ ಪ್ರಾಮಾಣಿಕತೆಯ ಅಭಾವದಲ್ಲಿಲ್ಲ ಬದಲಾಗಿ ಕೋಮುವಾದದ ಮೂಲವನ್ನು ಸರಿಯಾಗಿ ಕಂಡುಕೊಳ್ಳುವುದರಲ್ಲಿನ ಹಾಗೂ ತತ್ಪರಿಣಾಮವಾಗಿ ಸೂಕ್ತ ಪರಿಹಾರೋಪಾಯಗಳನ್ನು ಅಳವಡಿಸಿಕೊಳ್ಳುವುದರಲ್ಲಿನ ವೈಫಲ್ಯದಲ್ಲಿದೆ. ಇಂತಹ ಪ್ರಭಾವಶಾಲಿ ವ್ಯಕ್ತಿಗಳು ಕೂಡಾ ರಾಷ್ಟ್ರೀಯ ಹಿತಾಸಕ್ತಿ, ಧಾರ್ಮಿಕ ಸಹನೆ ಹಾಗೂ ಮಾನವತಾವಾದಿ ಮೌಲ್ಯಗಳ ಹೆಸರಿನಲ್ಲಿ, ಬರಿಯ ಮನವಿಯನ್ನು ಮಾಡುತ್ತಾ ಕೋಮುವಾದವನ್ನು ಸ್ವಲ್ಪ ಕೂಡಾ ನಾಶಮಾಡಲು ವಿಫಲರಾಗಿರುವಾಗ ನಾವು ಕೂಡಾ ಅದೇ ಮಾರ್ಗವನ್ನನುಸರಿಸುತ್ತಾ ನಮ್ಮ ದೇಶದಲ್ಲಿ ಅಪೂರ್ಣವಾಗಿ ಉಳಿದಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ಪೂರ್ಣಗೊಳಿಸುವ ವೇದನಾತ್ಮಕ ಪ್ರಕ್ರಿಯೆಯನ್ನು ತಪ್ಪಿಸಿದಲ್ಲಿ ಅದಕ್ಕೂ ಉತ್ತಮ ಫಲಿತಾಂಶವನ್ನೇನೂ ನಿರೀಕ್ಷಿಸಲು ಸಾಧ್ಯವಿಲ್ಲ.

ಸ್ನೇಹಿತರೇ, ನನ್ನ ಪ್ರಾಮಾಣಿಕ ದೃಢ–ನಂಬಿಕೆಗಳನ್ನು ವ್ಯಕ್ತಪಡಿಸುವಾಗ ನಾನು ನಿಮ್ಮಲ್ಲಿನ ಕೆಲವರ ಭಾವನೆಗಳನ್ನು ನೋಯಿಸಿದ್ದರೆ ನನ್ನನ್ನು ತಪ್ಪಾಗಿ ಭಾವಿಸದಿರಿ. ಓರ್ವ ಸೋದರ ಪ್ರತಿನಿಧಿಯಾಗಿ, ಕೋಮುವಾದ ಹಾಗೂ ಕೋಮು ಹಿಂಸೆಗಳ ಪರಿಣಾಮಗಳ ಬಗೆಗಿನ ನಿಮ್ಮ ಕಾಳಜಿ ಹಾಗೂ ಅವುಗಳನ್ನು ನಮ್ಮ ದೇಶದ ಸಾಮಾಜಿಕ–ರಾಜಕೀಯ ಜೀವನದಿಂದ ನಿರ್ಮೂಲನಗೊಳಿಸುವಲ್ಲಿನ ನಿಮ್ಮ ದೃಢ ನಿರ್ಧಾರದಲ್ಲಿ ಸಮಭಾಗಿಯಾಗಿ ನಾನು ನಿಮ್ಮಲ್ಲಿ ಕೋರಿಕೊಳ್ಳುವುದೆಂದರೆ, ಪೂರ್ವಗ್ರಹಗಳನ್ನಿರಿಸಿಕೊಳ್ಳದೆ ನನ್ನ ಮಾತುಗಳನ್ನು ವೈಜ್ಞಾನಿಕವಾಗಿ ಆಲಿಸಬೇಕೆಂಬುದು. ನನ್ನ ಅಭಿಪ್ರಾಯಗಳನ್ನು ತಿರಸ್ಕರಿಸುವ ಎಲ್ಲಾ ಹಕ್ಕು ನಿಮಗಿದ್ದೇ ಇದೆ; ಆದರೆ ತಿರಸ್ಕರಿಸುವ ಮೊದಲು ದಯವಿಟ್ಟು ಅವನ್ನು ವಿಜ್ಞಾನದ ಒರೆಗಲ್ಲಿನ ಮೇಲೆ ಪರೀಕ್ಷೆಗೊಳಪಡಿಸುವ ಶ್ರಮತೆಗೆದುಕೊಳ್ಳಿ. ಇದು ನಿಮ್ಮಲ್ಲಿ ನನ್ನ ವಿನಂತಿ. ಕಲ್ಕತ್ತಾದ 'ದೆಹಲಿಹಾಲ್'ನಲ್ಲಿ 1964 ರ ಅಕ್ಟೋಬರ್ ತಿಂಗಳಲ್ಲಿ ನಡೆದ 'ಪ್ರಜಾತಾಂತ್ರಿಕ ಸಮಾವೇಶ' ದ ಪ್ರಮುಖ ಸಂಘಟನಾಕಾರರಲ್ಲಿನ ಕೆಲವರ ಭಾಷಣಗಳನ್ನು ಕೇಳುವ ಹಾಗೂ ಆ ಸಮಾವೇಶದ ಕರಡು ಪ್ರಣಾಳಿಕೆಯನ್ನು ಓದುವ ಸುಯೋಗ ನನಗೆ ಲಭಿಸಿತ್ತು. 'ಪ್ರಜಾತಾಂತ್ರಿಕ ಸಮಾವೇಶ'ದ ಈ ಸಂಘಟನಾಕಾರರು ನಮ್ಮ ದೇಶದಲ್ಲಿನ ಕೋಮುವಾದದ ಸಮಸ್ಯೆಗಳನ್ನು ಧಾರ್ಮಿಕ ಸಹನೆ, ಜನತೆಯ ಸದ್ಭಾವನೆಗೆ ಅಸ್ಪಷ್ಟ ಮಾನವತಾವಾದಿ ಮನವಿ ಹಾಗೂ ನಮ್ಮ ಜನತೆಯ ರಾಷ್ಟ್ರವಾದಿ ಭಾವೋದ್ವೇಗವನ್ನು ಪ್ರೇರೇಪಿಸುವ ಆಧಾರದಲ್ಲಿ ಪರಿಹರಿಸುವ ಉದ್ದೇಶ ಹೊಂದಿದ್ದಾರೆ ಎಂಬುದು ನನ್ನ ಅಭ್ಯಸಿಕೆ. ಅವರ ಪ್ರಾಮಾಣಿಕತೆಯನ್ನು ಅರೆಕ್ಷಣವಾದರೂ ನಾನು

ಅನುಮಾನಿಸುತ್ತಿಲ್ಲ, ಆದರೆ ಅವರು ಪ್ರತಿಪಾದಿಸುತ್ತಿರುವ ಮಾರ್ಗವು ಮುಂಚಿನಂತೆಯೇ ವಿಫಲವಾಗುವುದು ಖಂಡಿತ, ಏಕೆಂದರೆ ಅದು ಅವೈಜ್ಞಾನಿಕವಾದದ್ದು. ಸರಿಸುಮಾರು ಎಲ್ಲಾ ಧರ್ಮದ ಪ್ರವಾದಿಗಳೂ ಮತೀಯ ಸಹನೆಯನ್ನು ಆಚರಿಸಲು ನಮಗೆ ಬೋಧಿಸಲಿಲ್ಲವೆ? ಆದಾಗ್ಯೂ ಅವರ ಉಪದೇಶಗಳು ನಮ್ಮ ಸಾಮಾಜಿಕ–ರಾಜಕೀಯ ಜೀವನದಿಂದ ಕೋಮುವಾದವನ್ನು ನಿರ್ಮೂಲನಗೊಳಿಸುವ ವಿಷಯದಲ್ಲಿ ಏನೂ ಪ್ರಯೋಜನಕಾರಿಯಾಗಲಿಲ್ಲ. ಅದಕ್ಕೆ ಕಾರಣ  ಅವರಲ್ಲಿ ಪ್ರಾಮಾಣಿಕತೆಯ ಕೊರತೆ ಇತ್ತೆಂದಲ್ಲ; ಆದರೆ ಸಮಸ್ಯೆಯ ಬಗ್ಗೆ ಅವರ ಧೋರಣೆ ಹಾಗೂ ಅದರ ನಿರ್ಮೂಲನಕ್ಕೆಂದು ಅವರಿಂದ ಸೂಚಿಸಲ್ಪಟ್ಟ ಪ್ರಕ್ರಿಯೆ ಅವೈಜ್ಞಾನಿಕ ಸ್ವಭಾವದ್ದಾಗಿತ್ತು. ಪ್ರಕ್ರಿಯೆಯೇ ಅಂತಿಮವಾಗಿ ನಿರ್ಣಾಯಕವಾದುದು ಎಂಬುದನ್ನು ಗ್ರಹಿಸಲೇಬೇಕು. ಆದ್ದರಿಂದ ಒಂದುವೇಳೆ ಪ್ರಜಾತಾಂತ್ರಿಕ ಸಮಾವೇಶದ ಉದ್ದೇಶವು ನಿಜವಾಗಿಯೂ ಗಂಭೀರವಾಗಿದ್ದರೆ, ಅದು ನಮ್ಮ ದೇಶದಲ್ಲಿನ ಕೋಮುವಾದದ ಮೂಲಕಾರಣವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬೇಕು ಮತ್ತು ಅದನ್ನು ನಿವಾರಿಸಲು ಸರಿಯಾದ ಪ್ರಕ್ರಿಯೆಯನ್ನು ಅನುಸರಿಸಬೇಕು. ಮತೀಯ ಸಹನೆಗಾಗಿಯ ಮನವಿ ಸಮಸ್ಯೆಯನ್ನು ಪರಿಹರಿಸಲಾರದು, ಬದಲಿಗೆ, ಸರಿಯಾದ ಪ್ರಕ್ರಿಯೆಯೇ ಜನರಲ್ಲಿ ಮತೀಯ ಸಹನೆಯನ್ನು ಉಂಟುಮಾಡುತ್ತದೆ.

ನಾವು ಮುಖ್ಯ ವಿಷಯಕ್ಕೆ ಬರುವುದಕ್ಕಿಂತ ಮೊದಲು, ಇತಿಹಾಸದ ಹೆಸರಿನಲ್ಲಿ ಇತಿಹಾಸವನ್ನೇ ಮಿಥ್ಯಗೊಳಿಸಿ, ಹಿಂದೂ ಮುಸ್ಲಿಂ ಎರಡೂ ಕೋಮುಗಳ ನಡುವಣ ರಾಷ್ಟ್ರೀಯ ಏಕೀಕರಣದ ಮಾತಿರಲಿ, ಯಾವ ಒಗ್ಗಟ್ಟೂ ಸಾಧ್ಯವಿಲ್ಲವೆಂದು ಸಾಧಿಸುತ್ತಿರುವ ಹಿಂದೂ ಮತ್ತು ಮುಸ್ಲಿಂ ಎರಡೂ ಕೋಮುಗಳ ಒಂದು ವಿಭಾಗದ ಜನರನ್ನು ನನ್ನ ಅಧೀನದಲ್ಲಿರುವ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಿ ಖಂಡಿಸುವುದು ನನ್ನ ಕರ್ತವ್ಯವೆಂದು ಭಾವಿಸುವೆ. ಎಷ್ಟೇ ಗಟ್ಟಿಯಾಗಿ ಹಾಗೂ ಖಡಾಖಂಡಿತವಾಗಿ ವಾದಿಸಿದರೂ ಇದು ತಾರ್ಕಿಕವಾದುದೂ ಅಲ್ಲ ಮತ್ತು ವಾಸ್ತವಾಂಶಗಳಿಂದ ಸಾಬೀತಾಗಿರುವುದೂ ಅಲ್ಲ. ಇದು ಹುಚ್ಚು ಪ್ರಾಣಿಯೊಂದರ ಕೋಪೋದ್ರಿಕ್ತ ಬೊಗಳುವಿಕೆಯಂತೆಯೇ ಕೇಳಿಬರುತ್ತದೆ. ಬರ್ಮಾ ಜನರಲ್ಲಿ ಮುಸ್ಲಿಮರು ಗಣನೀಯ ಪ್ರಮಾಣದಲ್ಲಿದ್ದಾಗ್ಯೂ ಬರ್ಮಾ ಜನರು ಒಂದೇ ರಾಷ್ಟ್ರವಾಗಿ ಹೊರಹೊಮ್ಮಿದರು ಎಂಬುದನ್ನು ನಾವು ಹೇಗೆ ಮರೆಯಬಲ್ಲೆವು? ಭಾರಿ ಸಂಖ್ಯೆಯಲ್ಲಿ ಮುಸ್ಲಿಮರಿದ್ದರೂ ಸಹ ಇಂಡೋನೇಷಿಯಾದ ಜನತೆಯೂ ಕೂಡಾ ಒಂದೇ ರಾಷ್ಟ್ರವಾಗಿ ಹೊರಹೊಮ್ಮಿದ್ದಾರೆ. ಚೀನಾ ಹಾಗೂ ಸೋವಿಯತ್ ಯೂನಿಯನ್‌ಗಳಲ್ಲಿ ಮುಸ್ಲಿಂ ಜನಸಂಖ್ಯೆ ಕಡಿಮೆ ಪ್ರಮಾಣದ್ದೇನೂ ಅಲ್ಲ. ಆದಾಗ್ಯೂ ಚೀನಾ ಮತ್ತು ಸೋವಿಯತ್ ಜನತೆ ಸಾಮರಸ್ಯದ ರಾಷ್ಟ್ರಗಳಾಗಿ ಹೊರಹೊಮ್ಮಿವೆ. ಇವಾವುದೇ ದೇಶಗಳಲ್ಲಿಯೂ ಭಾರತ ಪಾಕಿಸ್ತಾನಗಳಲ್ಲಿ ಜರುಗುವಂತೆ ಕಾಲಕಾಲಕ್ಕೆ ಮುಸ್ಲಿಂ ಮತ್ತು ಮುಸ್ಲಿಮೇತರರ ನಡುವಣ ಕೋಮು ಗಲಭೆಗಳು ಏಳುವುದಿಲ್ಲ. ಇವಾವುದೇ ದೇಶದಲ್ಲಾಗಲೀ ಮುಸ್ಲಿಂ ಜನಸಮೂಹ, ವಿಭಜಿತ–ಪೂರ್ವ ಭಾರತದಲ್ಲಿ ಆಗ್ರಹಿಸಿದಂತೆ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ಮುಂದಿಟ್ಟಿಲ್ಲ ಅಥವಾ ಇಡುತ್ತಿಲ್ಲ. ನಮ್ಮಲ್ಲಿ ಘಟಿಸಿದಂತೆ

ಇವಾವುದೇ ದೇಶದಲ್ಲಿಯೂ, ಮುಸ್ಲಿಂ ಮತ್ತು ಮುಸ್ಲಿಮೇತರ ಜನಸಂಖ್ಯೆಯ ಆಧಾರದ ಮೇಲೆ ಇಂಥ ವಿಭಜನೆಯಾಗುವ ದುರದೃಷ್ಟ ಘಟಿಸಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ತಮ್ಮ ವಸಾಹತುಶಾಹಿ ಆಳ್ವಿಕೆಯನ್ನು ಹಾಗೂ ತಮ್ಮ ಆರ್ಥಿಕ ಹಿತಾಸಕ್ತಿಯನ್ನು ಮುಂದುವರೆಸುವ ಸಲುವಾಗಿ ನಮ್ಮ ದೇಶದಲ್ಲಿ ಒಡೆದು ಆಳುವ ನೀತಿಯನ್ನು ಬಳಸಿದರು ಹಾಗೂ ಉದ್ದೇಶಪೂರ್ವಕವಾಗಿಯೇ ಮುಸ್ಲಿಂ ಜನತೆಯನ್ನು ರಾಷ್ಟ್ರವಾದಿ ಚಳುವಳಿಯ ವಿರೋಧಿಗಳನ್ನಾಗಿ ಮಾಡಿದರು ಎಂದು ವಾದಿಸಬಹುದೆಂಬುದು ನನಗೆ ತಿಳಿದಿದೆ. ಇದು ನಿಸ್ಸಂದೇಹವಾಗಿಯೂ ನಿಜ. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಬರ್ಮಾದಲ್ಲಿಯೂ ಕೂಡಾ ಇದೇ ಒಡೆದು ಆಳುವ ನೀತಿಯನ್ನು ಬಳಸಿರಲಿಲ್ಲವೇ? ಡಚ್ ಸಾಮ್ರಾಜ್ಯಶಾಹಿಗಳು ಸಹ, ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಇಂಡೋನೇಷಿಯಾದ ಜನರ ಐಕ್ಯತೆಯನ್ನು ಒಡೆಯುವ ಪ್ರಯತ್ನಗಳಲ್ಲಿ ಭಾರತದ ಬ್ರಿಟಿಷ್ ಆಳ್ವಿಕರಿಗಿಂತ ಯಾವುದೇ ರೀತಿಯಿಂದಲೂ ಕಡಿಮೆ ಉತ್ಸಾಹಿಗಳೇನೂ ಆಗಿರಲಿಲ್ಲ ಎಂಬುದು ವಾಸ್ತವಾಂಶವಲ್ಲವೆ? ಹಾಗಿದ್ದರೆ ಈ ಎಲ್ಲಾ ದೇಶಗಳ ಪೈಕಿ ಕಾಲಕಾಲಕ್ಕೆ ಕೋಮುವಾದಿ ಕ್ಷೋಭೆ, ಮುಸ್ಲಿಂ ಜನತೆಯಿಂದ ಪ್ರತ್ಯೇಕ ರಾಷ್ಟ್ರಕ್ಕಾಗಿ ಬೇಡಿಕೆ ಹಾಗೂ ಅಂತಿಮವಾಗಿ ಧರ್ಮದ ಆಧಾರದ ಮೇಲೆ ದೇಶದ ವಿಭಜನೆ, ಇವುಗಳಿಗೆ ಎಡೆಮಾಡಿಕೊಟ್ಟ ಕೋಮುವಾದದ ವಿಚಿತ್ರ ಸಮಸ್ಯೆಯನ್ನು ಭಾರತ ಮಾತ್ರ ಏಕೆ ಎದುರಿಸಿತು? ಭಾರತದ ಪರಿಸ್ಥಿತಿಯ ಈ ವೈಚಿತ್ರ್ಯವನ್ನು, ಕೇವಲ ನಮ್ಮ ದೇಶದ ಬ್ರಿಟಿಷ್ ಆಳರಸರ ಒಡೆದಾಳುವ ನೀತಿಯೇ ಅದಕ್ಕೆ ಏಕಮೇವ ಕಾರಣವೆಂದು ತೀರ್ಮಾನಿಸಿ ವಿವರಿಸಲು ಯತ್ನಿಸಿದರೆ ಅದು ನಮ್ಮನ್ನೇ ವಂಚಿಸಿಕೊಂಡಂತಾಗುತ್ತದೆ ಹಾಗೂ ನಮ್ಮ ರಾಷ್ಟ್ರೀಯ ವಿಮೋಚನಾ ಹೋರಾಟವು ಸಾದ್ಯಂತವೂ ಅನುಭವಿಸಿದ ಕೆಲವೊಂದು ಮೂಲಭೂತ ದೌರ್ಬಲ್ಯಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದಂತಾಗುತ್ತದೆ. ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ಬಲಹೀನಗೊಳಿಸುವ ಸಾಧನವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆ, ವಿಭಿನ್ನ ಕೋಮುಗಳ ನಡುವೆ ವಿಶಿಷ್ಟವಾಗಿ ಹಿಂದೂ ಮುಸ್ಲಿಮರ ನಡುವೆ ಸತತ ವೈರುಧ್ಯತೆಯ ಪರಿಸ್ಥಿತಿಯನ್ನು ಸೃಷ್ಟಿಸುವುದು, ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಏಕತೆಯನ್ನು ಮುರಿಯುವುದು ಹಾಗೂ ತನ್ಮೂಲಕ ಭಾರತದಲ್ಲಿ ಒಂದು ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯನ್ನು ಕುಂಠಿತಗೊಳಿಸುವುದು ತೀರಾ ಸಹಜವಾಗಿತ್ತು. ಮೂಢರ ಹೊರತಾಗಿ ಇನ್ಯಾರೂ ನಮ್ಮ ದೇಶದ ಸಾಮ್ರಾಜ್ಯಶಾಹಿ ಆಳರಸರಿಂದ ಇದಕ್ಕಿಂತ ಉತ್ತಮತರ ಸಂಚನ್ನು ನಿರೀಕ್ಷಿಸಲಾರರು. ಇದಲ್ಲದೆ ಪ್ರತಿಯೊಂದು ಪರತಂತ್ರ ದೇಶದಲ್ಲಿಯೂ ಸಾಮ್ರಾಜ್ಯಶಾಹಿಯ ಜೊತೆಗೂಡುವ ಹಾಗೂ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ವಿರೋಧಿಸುವ ಕೆಲವು ರಾಷ್ಟ್ರವಾದಿ ವಿರೋಧಿ ಶಕ್ತಿಗಳೂ, ವ್ಯಕ್ತಿಗಳೂ ಯಾವಾಗಲೂ ಇದ್ದೇ ಇರುತ್ತಾರೆ. ರಾಜರು, ನವಾಬರು, ಜಮೀನುದಾರರು, ದಲ್ಲಾಳಿ ಬಂಡವಾಳಿಗರು, ಮೇಲ್ದರ್ಜೆ ಅಧಿಕಾರಿಗಳು ಹಾಗೂ ಸಾಮ್ರಾಜ್ಯವಾದದ ಏಜೆಂಟರುಗಳಿಂದ ಪ್ರತಿನಿಧಿಸಲ್ಪಟ್ಟ ಈ ಸಾಮ್ರಾಜ್ಯಶಾಹಿ ಪರ, ರಾಷ್ಟ್ರವಾದ–ವಿರೋಧಿ ಜನಭಾಗವು, ತನ್ನ ಪಟ್ಟಭದ್ರ ಹಿತಾಸಕ್ತಿಯ ಉಳಿವಿಗಾಗಿ

ಭಾರತದಲ್ಲಿ ಸಾಮ್ರಾಜ್ಯಶಾಹಿ ಆಳ್ವಿಕೆ ಒಂದು ಅವಶ್ಯಕತೆ ಎಂದು ಅರಿತಿತ್ತು. ಆದ್ದರಿಂದ ಈ ಶಕ್ತಿಗಳ ಹಾಗೂ ವ್ಯಕ್ತಿಗಳ ರಾಷ್ಟ್ರವಾದ ವಿರೋಧಿ ಪಾತ್ರವೂ ಸಹ ಅನಿರೀಕ್ಷಿತವಾದುದೇನೂ ಅಲ್ಲ. ಹಾಗಿದ್ದರೆ ಸಾಮ್ರಾಜ್ಯಶಾಹಿ ಆಳ್ವಿಕರು ಹಾಗೂ ಅವರ ಹಿಂಬಾಲಕರು ಮುಸ್ಲಿಂ ಜನಸಮುದಾಯವನ್ನು ರಾಷ್ಟ್ರವಾದಿ ಚಳುವಳಿಯ ಪ್ರಧಾನ ಧಾರೆಯಿಂದ ಪ್ರತ್ಯೇಕಿಸಿ, ಅವರನ್ನು ರಾಷ್ಟ್ರವಾದಿ ಶಕ್ತಿಗಳ ವಿರುದ್ಧ ಬಳಸುವುದನ್ನು ತಡೆಗಟ್ಟುವಲ್ಲಿ ನಮ್ಮ ರಾಷ್ಟ್ರವಾದಿ ನಾಯಕತ್ವದ ವಿಫಲತೆಯನ್ನು ಹೇಗೆ ಗ್ರಹಿಸಬೇಕು?

ವೈಫಲ್ಯಕ್ಕೆ ಕಾರಣವು ನಮ್ಮ ದೇಶದ ರಾಷ್ಟ್ರೀಯ ವಿಮೋಚನಾ ಚಳುವಳಿಯ ನಾಯಕತ್ವದ ಸ್ವಭಾವದಲ್ಲಿಯೇ ಅಡಗಿದೆ. ನಮ್ಮ ಹಲವು ರಾಷ್ಟ್ರವಾದಿ ಇತಿಹಾಸಕಾರರು ಎಷ್ಟೇ ಎದುರು ವಾದಿಸಿದರೂ ಬ್ರಿಟಿಷ್–ಪೂರ್ವ ಯುಗದಲ್ಲಿ ಇಡಿಯಾಗಿ ಭಾರತವು ರಾಜಕೀಯವಾಗಿ ಎಂದೂ ಒಂದು ಅಖಂಡವಾಗಿರಲಿಲ್ಲ ಎಂಬುದು ಕಟು ವಾಸ್ತವಾಂಶ. ಆ ಕಾಲದಲ್ಲಿ ನಮ್ಮಲ್ಲಿ ಇದ್ದುದು ಬಹುಸಂಖ್ಯೆಯಲ್ಲಿನ ಪ್ರತ್ಯೇಕ ಸಂಸ್ಥಾನಗಳು. ಕೇಂದ್ರೀಕೃತ ಬ್ರಿಟಿಷ್ ಆಡಳಿತದಲ್ಲಿ ಮಾತ್ರವೇ ಭಾರತವು ಒಂದು ರಾಜಕೀಯ ಅಖಂಡತೆಯನ್ನು ಪಡೆಯಿತು ಮತ್ತು ಇದು, ಅದುವರೆವಿಗೂ ಇರದಿದ್ದ ಆಧುನಿಕ 'ಅಖಿಲ ಭಾರತ'ದ ಪರಿಕಲ್ಪನೆಯು ಹೊರಹೊಮ್ಮಲು ಬೇಕಾದ ವಾಸ್ತವಿಕ ಪರಿಸ್ಥಿತಿಯನ್ನು ಹಂತಹಂತವಾಗಿ ನಿರ್ಮಿಸಿತು. ಭಾರತದ ಕೇಂದ್ರೀಕೃತ ಬ್ರಿಟಿಷ್ ಆಡಳಿತದ ಜೊತೆಗೆ ರಾಷ್ಟ್ರೀಯ ಮಾರುಕಟ್ಟೆಯ ಹೊರಹೊಮ್ಮುವಿಕೆ ಹಾಗೂ ಅಖಿಲ ಭಾರತ ಮಟ್ಟದಲ್ಲಿ ವಾಣಿಜ್ಯ ವ್ಯಾಪಾರಗಳ ಮತ್ತು ಜನರ ನಡುವಣ ವಿನಿಮಯ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಭಾರತೀಯ ಜನರ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಗತಿಯಲ್ಲಿ, ಭಾರತದಲ್ಲಿ ವಿವಿಧ ಭಾಷೆಗಳನ್ನಾಡುವ ವಿವಿಧ ರಾಷ್ಟ್ರೀಯತೆಗಳು ಹಾಗೂ ವಿವಿಧ ಮತಧರ್ಮಗಳನ್ನು ಪಾಲಿಸುವ ವಿಭಿನ್ನ ಕೋಮುಗಳು ಒಂದುಗೂಡುವ ಹಾಗೂ ಒಂದೇ ರಾಷ್ಟ್ರವಾಗಿ ರೂಪುಗೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿದ್ದವು. ಒಂದು ವೇಳೆ ನಮ್ಮ ದೇಶದ ಈ ರಾಷ್ಟ್ರೀಯ ಚಳುವಳಿಯ ನೇತೃತ್ವವು ಕಾರ್ಮಿಕವರ್ಗದ ಕೈಯಲ್ಲಿ ಇದ್ದದ್ದೇ ಆಗಿದ್ದರೆ, ಸಾಮ್ರಾಜ್ಯವಾದವನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸಲು ಶಕ್ಯವಾಗಿರುತ್ತಿತ್ತು, ಅಷ್ಟೇ ಅಲ್ಲದೇ ದೇಶವನ್ನು ಬಂಡವಾಳವಾದೇತರ ಬೆಳವಣಿಗೆಯ ಮಾರ್ಗದಲ್ಲಿ ಕೊಂಡೊಯ್ಯಲು ಹಾಗೂ ಚೀನಾ ಮತ್ತು ಸೋವಿಯತ್ ಒಕ್ಕೂಟಗಳಲ್ಲಿ ನಡೆಸಿರುವಂತೆ ರಾಷ್ಟ್ರೀಯ, ಕೋಮು ಅಥವಾ ಜನಾಂಗೀಯ ಸಮಸ್ಯೆಗಳನ್ನು ಒಂದೇ ಬಾರಿಗೆ ಪರಿಹರಿಸಲು ಸಹ ಸಾಧ್ಯವಾಗುತ್ತಿತ್ತು. ಆದರೆ ಭಾರತದ ಜನರ ದುರದೃಷ್ಟಕ್ಕೆ ರಾಷ್ಟ್ರೀಯ ವಿಮೋಚನಾ ಚಳುವಳಿಯ ನಾಯಕತ್ವವು ನಮ್ಮ ದೇಶದ ರಾಷ್ಟ್ರೀಯ ಬೂರ್ಜ್ವಾಜಿಗಳ ಕೈಯಲ್ಲಿ ಇತ್ತು ಹಾಗೂ ಇದೇ ಭಾರತದ ಪರಿಸ್ಥಿತಿಯ ವಿಚಿತ್ರತೆಗೆ ಕಾರಣವಾಗಿದೆ.

ಮೊದಲಿಗೆ, ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ, ಯಾವಾಗ ಬಂಡವಾಳವಾದವು ಒಂದು ಜಾಗತಿಕ ಸಾಮಾಜಿಕ ಶಕ್ತಿಯಾಗಿ ತನ್ನ ಮುಂಚಿನ ಕ್ರಾಂತಿಕಾರಿ ಗುಣಧರ್ಮವನ್ನು ಕಳೆದುಕೊಂಡದ್ದಷ್ಟೇ ಅಲ್ಲದೇ ಖಚಿತವಾಗಿಯೂ ಕ್ರಾಂತಿ ವಿರೋಧಿಯಾಗಿತ್ತೋ, ಆಗ ಭಾರತದಲ್ಲಿ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆ

ಪ್ರಾರಂಭವಾಯಿತು ಎಂಬುದನ್ನು ಗಮನಿಸಬೇಕು. ಈ ಸಾಮಾನ್ಯ ಲಕ್ಷಣದ ಜೊತೆಗೆ ಭಾರತದ ಬಂಡವಾಳವಾದಕ್ಕೆ ಅದರದೇ ವಿಶಿಷ್ಟ ಲಕ್ಷಣವಿತ್ತು. ಸ್ವತಂತ್ರವಾಗಿ ಬೆಳೆದ ಪಾಶ್ಚಾತ್ಯ ಬಂಡವಾಳವಾದಕ್ಕೆ ಭಿನ್ನವಾಗಿ, ಭಾರತದ ಬಂಡವಾಳವಾದವು ವಿದೇಶಿ ಹಣಕಾಸು ಬಂಡವಾಳದ ಪ್ರಾಬಲ್ಯದಡಿ ಊಳಿಗಮಾನ್ಯ ಸಂಬಂಧಗಳಿಂದಾವೃತವಾಗಿ ಬೆಳೆಯಿತು. ಇದರ ಫಲವಾಗಿ ಅದು ಕುಂಠಿತ ಬೆಳವಣಿಗೆಗೆ ಒಳಪಟ್ಟಿತು. ಭಾರತೀಯ ಬೂರ್ಜ್ವಾಜಿಯ ರಾಷ್ಟ್ರವಾದಿ ವಿಭಾಗವು ಸಹಜವಾಗಿಯೇ ಸಾಮ್ರಾಜ್ಯವಾದದ ವಿರುದ್ಧ ಚಳುವಳಿಗೆ ಪ್ರೇರೇಪಿಸಲ್ಪಟ್ಟಿತು. ಏಕೆಂದರೆ ತನ್ನ ವರ್ಗ ಆಳ್ವಿಕೆಯನ್ನು ಇಲ್ಲಿ ಸ್ಥಾಪಿಸುವ ಹಾಗೂ ಭಾರತದ ಜನತೆಯನ್ನು ನಿರಾತಂಕವಾಗಿ ಶೋಷಿಸುವ ಮಾರ್ಗದಲ್ಲಿ ನಮ್ಮ ದೇಶದಲ್ಲಿನ ಸಾಮ್ರಾಜ್ಯಶಾಹಿ ಆಳ್ವಿಕೆಯು ಅತಿಕ್ರಮಿಸಲಾಗದ ಅಡಚಣೆಯಾಗಿ ನಿಂತಿತ್ತು. ಆದರೆ 'ಸಾಮ್ರಾಜ್ಯವಾದ ಮತ್ತು ಕಾರ್ಮಿಕವರ್ಗ ಕ್ರಾಂತಿ'ಯ ಯುಗದಲ್ಲಿನ ಎಲ್ಲಾ ವಸಾಹತುಶಾಹಿ ಬೂರ್ಜ್ವಾಜಿಯಂತೆಯೇ ಭಾರತದ ಬೂರ್ಜ್ವಾಜಿ ಕೂಡಾ ಸಾಮ್ರಾಜ್ಯವಾದದ ವಿರುದ್ಧ ಜನತೆಯ ಕ್ರಾಂತಿಕಾರಿ ಹೋರಾಟದ ಬಗ್ಗೆ ಮಾರಣಾಂತಿಕ ಭಯಕ್ಕೊಳಪಟ್ಟಿತ್ತು. ಏಕೆಂದರೆ, ರಾಷ್ಟ್ರೀಯ ವಿಮೋಚನೆಗಾಗಿಯ ಭಾರತದ ಜನತೆಯ ಕ್ರಾಂತಿಕಾರಿ ಸಂಘರ್ಷವು ಒಂದು ವೇಳೆ ಯಶಸ್ವಿಯಾದರೆ ಅದು ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು ಅಂತ್ಯಗೊಳಿಸುವುದಷ್ಟೆ ಅಲ್ಲದೆ, ಅದರೊಟ್ಟಿಗೆ ರಾಷ್ಟ್ರೀಯ ಬೂರ್ಜ್ವಾಜಿಯನ್ನು ಹೋರಾಟದ ನಾಯಕತ್ವದಿಂದ ತೆಗೆದುಹಾಕುತ್ತಿತ್ತು. ಬಂಡವಾಳೇತರ ರೀತಿಯ ಅಭಿವೃದ್ಧಿಯ ಪಥವನ್ನು ತೆರೆದುಬಿಡುತ್ತಿತ್ತು ಹಾಗೂ ಭಾರತದಲ್ಲಿ ಬಂಡವಾಳಶಾಹಿ ಆಳ್ವಿಕೆಯ ಸ್ಥಾಪನೆಯ ಎಲ್ಲ ಸಾಧ್ಯತೆಗಳನ್ನು ಸಂಪೂರ್ಣವಾಗಿ ನುಚ್ಚುನೂರಾಗಿಸುತ್ತಿತ್ತು ಎಂದು ಅದು ಆತಂಕಗೊಂಡಿತ್ತು. ಒಂದೆಡೆ ಸಾಮ್ರಾಜ್ಯವಾದದೊಂದಿಗೆ ವೈರುಧ್ಯ ಹಾಗೂ ಇನ್ನೊಂದೆಡೆ ಸಾಮ್ರಾಜ್ಯವಾದದ ವಿರುದ್ಧ ಜನತೆಯ ಕ್ರಾಂತಿಕಾರಿ ಹೋರಾಟದ ಮಾರಣಾಂತಿಕ ಭೀತಿ ಇವುಗಳು ಭಾರತೀಯ ಬೂರ್ಜ್ವಾಜಿಯ ರಾಷ್ಟ್ರವಾದಿ ವಿಭಾಗವು ಸಾಮ್ರಾಜ್ಯವಾದದ ವಿರುದ್ಧ ಒಂದು **'ಸುಧಾರಣಾವಾದಿ ವಿರೋಧಾತ್ಮಕ'** ಪಾತ್ರವನ್ನು ವಹಿಸುವಂತೆ ಮಾಡಿದವು. ಊಳಿಗಮಾನ್ಯ ಪದ್ಧತಿಯ ವಿರುದ್ಧದ ಅದರ ಪಾತ್ರವೂ ಸಮಾನವಾಗಿ ಸಂಧಾನಪರವಾಗಿತ್ತು. ಆದ್ದರಿಂದ ಭಾರತದ ಬಂಡವಾಳವಾದವು ಸಾಮ್ರಾಜ್ಯವಾದ ಹಾಗೂ ಊಳಿಗಮಾನ್ಯ ವ್ಯವಸ್ಥೆ, ಇವೆರಡರೊಂದಿಗೆ ಸಂಧಾನಗಳ ಮೂಲಕ ಬೆಳೆಯಲು ಯತ್ನಿಸಿತು. ಊಳಿಗಮಾನ್ಯ ವ್ಯವಸ್ಥೆಯೊಂದಿಗಿನ ಸಂಧಾನಗಳ ಫಲವೆಂದರೆ ಭಾರತದ ಬೂರ್ಜ್ವಾಜಿಯು ಸಮಾಜದ ಪ್ರಜಾತಾಂತ್ರೀಕರಣಕ್ಕೆ ಹಾಗೂ ವಿಭಿನ್ನ ಭಾಷೆಗಳನ್ನಾಡುವ ವಿವಿಧ ರಾಷ್ಟ್ರೀಯತೆಗಳನ್ನು ಹಾಗೂ ವಿಭಿನ್ನ ಧರ್ಮಗಳನ್ನು ಪಾಲಿಸುವ ಬೇರೆಬೇರೆ ಕೋಮುಗಳನ್ನು ಒಂದು ರಾಷ್ಟ್ರವಾಗಿ ಸಂಪೂರ್ಣವಾಗಿ ಒಗ್ಗೂಡಿಸಲು ಅಗತ್ಯವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯವನ್ನು ನೆರವೇರಿಸಲು ಸಾಧ್ಯವಾಗಲಿಲ್ಲ ಹಾಗೂ ಅದನ್ನವರು ಮಾಡಲೂ ಇಲ್ಲ. ಸಾಮ್ರಾಜ್ಯವಾದದ ವಿರುದ್ಧದ ರಾಜಕೀಯ ಹೋರಾಟದ ಗತಿಯಲ್ಲಿ ವಿವಿಧ ಭಾಷೆಗಳನ್ನಾಡುವ ಹಾಗೂ ವಿಭಿನ್ನ ಮತಗಳನ್ನು ಪಾಲಿಸುವ ಭಾರತದ ಜನತೆ ರಾಜಕೀಯವಾಗಿ ಒಂದು

ರಾಷ್ಟ್ರವಾಯಿತು. ಆದರೆ ಸಮಾಜದ ಪ್ರಜಾತಾಂತ್ರೀಕರಣಕ್ಕಾಗಿ ಊಳಿಗಮಾನ್ಯ ವ್ಯವಸ್ಥೆ, ಊಳಿಗಮಾನ್ಯ ಅನೈಕ್ಯತೆ ಹಾಗೂ ಧಾರ್ಮಿಕ ಶೃಂಖಲೆಗಳ ವಿರುದ್ಧ ಪ್ರಧಾನವಾಗಿ ಸಾಮಾಜಿಕ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ಪೂರೈಸುವಲ್ಲಿ, ನಮ್ಮ ರಾಷ್ಟ್ರೀಯ ವಿಮೋಚನಾ ಚಳುವಳಿಯ ನಾಯಕತ್ವದ ವೈಫಲ್ಯತೆಯಿಂದಾಗಿ ಭಾರತದ ಜನತೆ ಧರ್ಮ, ಜಾತಿ, ಭಾಷೆ, ಜನಾಂಗ ಮುಂತಾದವುಗಳಿಂದ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಭಿನ್ನ ಕೋಮುಗಳಾಗಿ ವಿಭಜನೆಗೊಂಡೇ ಉಳಿದವು.

ಇದಷ್ಟೇ ಅಲ್ಲ, ಭಾರತದ ರಾಷ್ಟ್ರವಾದಿ ನಾಯಕತ್ವವು ಸಾಮಾಜಿಕ–ಸಾಂಸ್ಕೃತಿಕ ಚಳುವಳಿಗಳನ್ನು ನಿರ್ವಹಿಸುವ ಮೂಲಕ ಭಾರತದ ಜನತೆಯನ್ನು ಧರ್ಮದ ಶೃಂಖಲೆಗಳಿಂದ ಮುಕ್ತಗೊಳಿಸಲು ಹಾಗೂ ಸಮಾಜವನ್ನು ಪ್ರಜಾತಾಂತ್ರೀಕರಣಗೊಳಿಸಲು ಪ್ರಯತ್ನಿಸದಿದ್ದುದು ಮಾತ್ರವಲ್ಲ; ಅದಕ್ಕೆ ವ್ಯತಿರಿಕ್ತವಾಗಿ ರಾಷ್ಟ್ರವಾದಿ ವಿಚಾರಗಳನ್ನು ಪ್ರಚುರಪಡಿಸಲು ಧರ್ಮವನ್ನೇ ಒಂದು ವಾಹಕವನ್ನಾಗಿ ಬಳಸಿತು. ಆದ್ದರಿಂದ ಭಾರತದ ರಾಷ್ಟ್ರವಾದವು ಮೂಲಭೂತವಾಗಿ ಧರ್ಮದತ್ತ ವಾಲಿತ್ತು. ಈ ರಾಷ್ಟ್ರವಾದವು ತನ್ನನ್ನು ಹಿಂದೂ ಧಾರ್ಮಿಕ ಪುನರುಜ್ಜೀವನವಾದಿ ಭಾರತದ ರಾಷ್ಟ್ರವಾದವು ಹಿಂದೂಯೇತರ ಜನತೆಯಲ್ಲಿ ಉಂಟುಮಾಡಿದ ಮಾನಸಿಕ ಪ್ರತಿಕ್ರಿಯೆಯೇ, **ಹಿಂದೂಯೇತರರು, ವಿಶಿಷ್ಟವಾಗಿ ಮುಸ್ಲಿಂ ಜನತೆಯು, ನಮ್ಮ ದೇಶದ ರಾಷ್ಟ್ರೀಯ ವಿಮೋಚನಾ ಚಳುವಳಿಯಿಂದ ದೂರವಿರುವುದಕ್ಕೆ ಬಹುಮಟ್ಟಿಗೆ ಕಾರಣವಾಯಿತು**. ಅಷ್ಟೇ ಅಲ್ಲದೆ ಇದು ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆ ಹಾಗೂ ರಾಷ್ಟ್ರವಾದಿ–ವಿರೋಧಿ, ಸಾಮ್ರಾಜ್ಯಶಾಹಿ ಪರವಾದ ಮುಸ್ಲಿಂ ಮುಖಂಡರುಗಳಿಗೆ, ಬ್ರಿಟಿಷ್ ಆಳ್ವಿಕೆಯಿಂದ ಸ್ವತಂತ್ರಗೊಂಡಾಗ ಭಾರತ, ಯಾವುದೇ ಮುಸ್ಲಿಮರಿಗೆ ಭದ್ರತೆ ಹಾಗೂ ಧಾರ್ಮಿಕ ನಂಬಿಕೆಯ ಸ್ವಾತಂತ್ರ್ಯಗಳೂ ಇಲ್ಲದಂತಹ ಹಿಂದೂಗಳ ನಿರಂಕುಶ ಪ್ರಭುತ್ವದ ಆಳ್ವಿಕೆಗಿಂತ ಉತ್ತಮವಾಗಿರಲಾರದು ಎಂಬುದಾಗಿ ಮುಸ್ಲಿಂ ಜನತೆಯ ಮನಸ್ಸಿಗೆ ನಾಟುವಂತೆ ಮಾಡಲು ಎಲ್ಲ ರೀತಿಯ ಅವಕಾಶಗಳನ್ನು ಸಹ ಮಾಡಿಕೊಟ್ಟಿತು. ಇಂತಹ ಸಂದರ್ಭದಲ್ಲಿ ತಮಗಾಗಿ ಬೇರೆಯದೆ ಮಾತೃಭೂಮಿಯ ಬೇಡಿಕೆಯನ್ನೊಡ್ಡಿದ್ದರೆ ಸಂಪೂರ್ಣ ದೋಷವನ್ನು ವಿಭಜಿತ–ಪೂರ್ವ ಭಾರತದ ಮುಸ್ಲಿಮರ ಮೇಲೆ ಹೊರಿಸುವುದು ತಪ್ಪಾಗುವುದಿಲ್ಲವೇ? ಬರಿ ಮುಸ್ಲಿಮರ ಬಗ್ಗೆ ಹೇಳುವುದೇಕೆ? ಸಾಮಾಜಿಕ, ಸಾಂಸ್ಕೃತಿಕ ಕ್ರಾಂತಿಗಳ ಕರ್ತವ್ಯಗಳನ್ನು ನೆರವೇರಿಸದಿದ್ದುದಕ್ಕಾಗಿ ಹಿಂದೂ ಕೋಮಿನ, ಸಾಮಾಜಿಕವಾಗಿ ಹಿಂದುಳಿದ ಸ್ತರಕ್ಕೆ ಸೇರಿದ ಜನತೆ, ಧಾರ್ಮಿಕ ಬಂಧನದಲ್ಲಿ ಉಳಿದಿರುವುದಷ್ಟೇ ಅಲ್ಲದೆ ಹಿಂದೂಗಳಲ್ಲಿ ನಾಮಾಂಕಿತ ಮೇಲ್ಜಾತಿಯವರಿಂದ ಸಾಮಾಜಿಕ ಹಾಗೂ ಸಾಂಸ್ಕೃತಿಕ ತುಳಿತಕ್ಕೂ ಒಳಗಾಗಿ ಉಳಿದರು ಮತ್ತು ಈ ನಿಟ್ಟಿನಲ್ಲಿ ಭಾರತೀಯ ರಾಷ್ಟ್ರವಾದವು ವಿಶಾಲ ಹಿಂದೂ ಪುನರುಜ್ಜೀವನದ ರೂಪದಲ್ಲಿ ತನ್ನನ್ನೇ ವ್ಯಕ್ತಪಡಿಸಿಕೊಳ್ಳಲೂ ಸಾಧ್ಯವಾಗಲಿಲ್ಲ. ಅದು ಗಾಂಧೀಜಿ ಹಾಗೂ ದೇಶದ ಇನ್ನಿತರ ಹಲವು ನಾಯಕರ ಯತ್ನಗಳಿದ್ದಾಗ್ಯೂ ಸಹ, ಇದಕ್ಕೆ ತದ್ವಿರುದ್ಧವಾಗಿ ಬಂಗಾಳದ ಬ್ರಾಹ್ಮಣ, ಕ್ಷತ್ರಿಯ, ಕಾಯಸ್ಥ ಹಾಗೂ ಬೈದ್ಯರ ಮತ್ತು ಇತರ ನಾಮಾಂಕಿತ ಮೇಲ್ಜಾತಿಯವರ ಪ್ರಭಾವಕ್ಕೆ ಒಳಪಟ್ಟ ಬ್ರಾಹ್ಮಣ ಪಂಥದ

ಪುನರುಜ್ಜೀವನದೊಂದಿಗೆ ತನ್ನನ್ನೇ ಐಕ್ಯಗೊಳಿಸಿಕೊಂಡಿತು. ಹಿಂದೂ ಪುನರುಜ್ಜೀವನದ ಪರಿಕಲ್ಪನೆಯಲ್ಲಿ ಪ್ರಕಟಗೊಂಡ ಧರ್ಮದ ಪರಿಕಲ್ಪನೆಯು ಸಂಕುಚಿತ ಮತೀಯ ಭಾವನೆಗಿಂತ ಹೆಚ್ಚು ಮಾನವತಾವಾದಿಯಾಗಿತ್ತು ಹಾಗೂ ಉಳಿದ ಧರ್ಮಗಳ ವಿರುದ್ಧ ಕಾದಾಟದ ಭಾವನೆಗಿಂತ ಹೆಚ್ಚು ಸಹಿಷ್ಣುತೆಯುಳ್ಳದ್ದಾಗಿತ್ತು ಎಂಬುದೇನೋ ನಿಜ.

ವಿಪರ್ಯಾಸವೆಂದರೆ, ಭಾರತದ ರಾಷ್ಟ್ರವಾದಿ ನಾಯಕತ್ವವು ಎಲ್ಲಾ ರೀತಿಯ ಧಾರ್ಮಿಕ ಸಂಕೀರ್ಣತೆಗಳಿಂದ ಹೊರಬಂದು, ತನ್ಮೂಲಕ ವಿಭಿನ್ನ ನಂಬಿಕೆಗಳನ್ನು ಹೊಂದಿರುವ ವಿಭಿನ್ನ ಕೋಮುಗಳನ್ನು ಒಂದು ಏಕರೂಪದ ರಾಷ್ಟ್ರವನ್ನಾಗಿಸಿ ಸಮಗ್ರಗೊಳಿಸುವ ಬದಲು, ಅವರನ್ನು ಒಂದು ರಾಷ್ಟ್ರವನ್ನಾಗಿ ಒಗ್ಗೂಡಿಸಲು, ಹಿಂದೂ ಧರ್ಮದ ಸಹನಶೀಲತೆ ಹಾಗೂ ವಿಶಾಲತೆಗಳನ್ನು ಸಾಧನವನ್ನಾಗಿ ಬಳಸಿಕೊಂಡಿತು. ನಿಖರವಾಗಿ ಇದೇ ಕಾರಣದಿಂದಾಗಿಯೇ ಮುಸ್ಲಿಂ ಜನತೆಯನ್ನು ತನ್ನೆಡೆಗೆ ಒಲಿಸಿಕೊಳ್ಳುವ ಸಲುವಾಗಿ, ಪ್ರಜಾತಾಂತ್ರಿಕ ಟರ್ಕಿಯ ಹೊರಹೊಮ್ಮುವಿಕೆಗಾಗಿ ಕೇಮಲ್ ಪಾಷಾರ ನೇತೃತ್ವದಲ್ಲಿ ಸ್ವತಃ ಟರ್ಕಿಯ ಜನರೇ ಅತ್ಯಂತ ಚೈತನ್ಯಶೀಲತೆಯಿಂದ ತಿರಸ್ಕರಿಸಿದಂತಹ ಮಧ್ಯಕಾಲೀನ ಇಸ್ಲಾಮೀ ಅಸಂಗತಿ (ಅನಾರ್ಕಿಸಮ್) ಯನ್ನು ಪುನರ್‌ಸ್ಥಾಪಿಸುವ ಒಂದು ಚಳುವಳಿಯಾದ 'ಖಿಲಾಫತ್'ನ ಬೇಡಿಕೆಯನ್ನು, ತನ್ನ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳುವುದನ್ನು ಬಿಟ್ಟು ಬೇರೆ ದಾರಿಯನ್ನು ಕಾಣಲಿಲ್ಲ. ಹಿಂದೂ ಧರ್ಮದ ಸಹನಶೀಲತೆ ಮತ್ತು ವಿಶಾಲತೆಯ ಆಧಾರದ ಮೇಲೆ ಅಥವಾ ಒಂದು ಪ್ರಜಾತಾಂತ್ರಿಕ ಸಮಾಜದ ತತ್ವಗಳಿಗೆ ಅಸಂಗತವಾದ ಇಸ್ಲಾಮಿ ಧಾರ್ಮಿಕ ಆಚರಣೆಗಳನ್ನು ಉಳಿಸಿಕೊಳ್ಳುವಲ್ಲಿ ಸಹಾಯ ಮಾಡುವುದರ ಮೂಲಕ, ಮುಸ್ಲಿಂ ಜನಸಮೂಹವನ್ನು ಭಾರತ ರಾಷ್ಟ್ರದೊಂದಿಗೆ ಸಮಗ್ರಗೊಳಿಸುವ ರಾಷ್ಟ್ರವಾದಿ ಬೂರ್ಜ್ವಾ ನಾಯಕತ್ವದ ಈ ಪ್ರಯತ್ನಗಳು, ಮುಸ್ಲಿಂ ಜನತೆ ಹಾಗೂ ರಾಷ್ಟ್ರವಾದಿ ಶಕ್ತಿಗಳ ನಡುವಿನ ಕಂದರವನ್ನು ಹಿಗ್ಗಿಸಿತಷ್ಟೆ. ಅದು ಅನಿವಾರ್ಯವಾಗಿತ್ತು ಕೂಡ. ಏಕೆಂದರೆ ಒಗ್ಗೂಡಿಸುವಿಕೆಯ ಪ್ರಕ್ರಿಯೆಗೆ ಅಡ್ಡಿಯಾಗುವಂತಹ ಶಕ್ತಿಯಾದ ಧಾರ್ಮಿಕ ಆಚಾರಗಳನ್ನು ಬೆಂಬಲಿಸುವ ಮೂಲಕ, ಒಂದು ಏಕರೂಪದ ಅಖಂಡ ರಾಷ್ಟ್ರವಾಗಿ ಧರ್ಮ, ಭಾಷೆ, ಜಾತಿ, ಜನಾಂಗ ಮುಂತಾದವುಗಳಲ್ಲೂ ಭಿನ್ನತೆ ಹೊಂದಿದ ಜನರ ನೈಜ ಒಗ್ಗೂಡಿಸುವಿಕೆಯನ್ನು ಎಂದಿಗೂ ಸಾಧಿಸಲಾಗುವುದಿಲ್ಲ. ಒಂದುರಾಷ್ಟ್ರವಾಗಿ ವಿಭಿನ್ನ ಕೋಮುಗಳ ನೈಜ ಏಕೀಕರಣವನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ಸಾಧಿಸುವ ಗತಿಯಲ್ಲಿ, ಸಮಾಜದ ಪ್ರಜಾತಾಂತ್ರೀಕರಣದ ಮೂಲಕ ವ್ಯಕ್ತಿಗಳ ಸಾಮಾಜಿಕ ಚಟುವಟಿಕೆಗಳ ಸಂಬಂಧವಾಗಿ ಧರ್ಮವನ್ನು ಸಂಪೂರ್ಣವಾಗಿ ಶಕ್ತಿಹೀನವನ್ನಾಗಿ ಮಾಡುವ ಮೂಲಕ ಮಾತ್ರ ಸಾಧಿಸಬಹುದು. ರಾಷ್ಟ್ರೀಯ ಬೂರ್ಜ್ವಾ ನಾಯಕತ್ವವಾಗಲಿ, ಅಥವಾ ಈ ರಾಷ್ಟ್ರೀಯ ಬೂರ್ಜ್ವಾ ನಾಯಕತ್ವಕ್ಕೆ ಪರ್ಯಾಯ ನಾಯಕತ್ವವನ್ನು ಸ್ಥಾಪಿಸುವ ಅವಶ್ಯಕತೆಯ ಕುರಿತು ಮಾತನ್ನಾಡುತ್ತಿದ್ದ ಶಕ್ತಿಗಳಾಗಲೀ, ಭಾರತ ರಾಷ್ಟ್ರವನ್ನು ನಿರ್ಮಿಸುವ ಈ ಅವಶ್ಯಕ ಕಾರ್ಯಗಳನ್ನು ನೆರವೇರಿಸಲಿಲ್ಲ. ಹೀಗಾಗಿ, ಎಲ್ಲ ಕೋಮುಗಳನ್ನು ಒಂದು ರಾಷ್ಟ್ರವಾಗಿ ಒಗ್ಗೂಡಿಸುವಲ್ಲಿ

ಪ್ರಾಮಾಣಿಕತೆಯಿದ್ದಾಗ್ಯೂ, ಈ ಉದ್ದೇಶಕ್ಕಾಗಿ ಬಳಸಿದ ತಪ್ಪು ಪ್ರಕ್ರಿಯೆ, ವಿಭಿನ್ನ ಕೋಮಿನವರನ್ನು, ವಿಶಿಷ್ಟವಾಗಿ ಮುಸ್ಲಿಮರನ್ನು, ಒಂದು ಅಖಂಡ ರಾಷ್ಟ್ರವಾಗಿ ಪರಿಕಲ್ಪನೆಯಲ್ಲಿ ಏಕೀಕರಿಸುವಲ್ಲಿ ವಿಫಲಗೊಂಡಿತು. ನಾನು ಹಿಂದಿನ ಇತಿಹಾಸಕ್ಕೆ ಸಂಬಂಧಿಸಿ ಚರ್ಚಿಸಿರುವುದು ವ್ಯಾಸಂಗದ ಆಸಕ್ತಿಯಿಂದಲ್ಲ, ಆದರೆ ಇತಿಹಾಸದಿಂದ ಪಾಠಗಳನ್ನು ಕಲಿಯಲೋಸುಗ. ಧಾರ್ಮಿಕ ಸಂಕೀರ್ಣತೆಯನ್ನು ಮೀರಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದ ರಾಷ್ಟ್ರವಾದಿ ನಾಯಕತ್ವವು, ಸಾಮ್ರಾಜ್ಯವಾದ ಹಾಗೂ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ತನ್ನ ಸುಧಾರಣಾವಾದಿ ವಿರೋಧಾತ್ಮಕ ಪಾತ್ರದಿಂದಾಗಿ ಅದನ್ನು ಸಾಧಿಸಲಾಗಲಿಲ್ಲ. ಆಂತರಿಕವಾಗಿ ಈ ದೌರ್ಬಲ್ಯ ಹಾಗೂ ಬಾಹ್ಯವಾಗಿ ಭಾರತದ ಜನತೆಯನ್ನು ಒಂದು ರಾಷ್ಟ್ರವಾಗಿ ಬೆಳೆಸಬೇಕಾದ ಅವಶ್ಯಕತೆಯನ್ನು ಎದುರಿಸಿದ ಅದು ತನ್ನ ಮುಖವನ್ನು ಹಿಂದಕ್ಕೆ ತಿರುಗಿಸಿತು ಹಾಗೂ ವಿಭಿನ್ನ ಧರ್ಮಗಳನ್ನು ಪಾಲಿಸುವ ವಿವಿಧ ಕೋಮುಗಳನ್ನು ಹಿಂದೂ ಧರ್ಮದ ಸಹನೆ ಹಾಗೂ ವೈಶಾಲ್ಯಗಳ ಆಧಾರದ ಮೇಲೊಂದು ರಾಷ್ಟ್ರವಾಗಿ ಏಕೀಕರಿಸಲು ಪ್ರಯತ್ನಿಸಿತು. ರಾಷ್ಟ್ರೀಯ ನಾಯಕತ್ವವು ತಾನು ಅಧಿಕಾರಕ್ಕೆ ಬಂದ ನಂತರವೂ ಕೂಡ ಅಧಿಕಾರ ವಶದ ಮೊದಲು ಈ ವಿಷಯದಲ್ಲಿ ತಾನು ಅನುಸರಿಸಿದ ತಪ್ಪು ಧೋರಣೆಯನ್ನು ತಿದ್ದಿಕೊಳ್ಳಲಿಲ್ಲ. ನಮ್ಮ ರಾಷ್ಟ್ರದ ಪ್ರಸಕ್ತ ಆಳ್ವಿಕರು ಸಾಮಾಜಿಕ–ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ಕೈಗೊಳ್ಳುವ ಬದಲಿಗೆ, ಧರ್ಮಾತೀತತೆಯ ಹೆಸರಿನಲ್ಲಿ ಎಲ್ಲಾ ರೀತಿಯ ಧಾರ್ಮಿಕ ಆಚರಣೆಗಳು, ಸಂಪ್ರದಾಯಗಳು ಮತ್ತು ಪೂರ್ವಾಗ್ರಹಗಳಿಗೆ– ಇವು ಸ್ವಾತಂತ್ರ್ಯಪೂರ್ವ ಕಾಲಕ್ಕೆ ಹೋಲಿಸಿದರೆ ಹಲವಾರು ಪಟ್ಟು ಹೆಚ್ಚಿವೆ – ಬೆಂಬಲ ನೀಡುವ ಮೂಲಕ ಧರ್ಮಾತೀತತೆ–ವಿರೋಧಿ ಶಕ್ತಿಗಳಿಗೆ ಹಾಗೂ ಪ್ರವೃತ್ತಿಗಳಿಗೆ ಮತ್ತಷ್ಟು ಉತ್ಸಾಹದಿಂದ ಒತ್ತಾಸೆ ನೀಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ 'ಹಿಂದಿ–ಹಿಂದೂ–ಹಿಂದೂಸ್ಥಾನ'ದ ಘೋಷಣೆಯು ಈಗ ಬಲಿಷ್ಠವಾದ ನೆಲೆಯನ್ನು ಪಡೆದುಕೊಳ್ಳುತ್ತಿರುವುದರಲ್ಲಿ ಆಶ್ಚರ್ಯವೇನೂ* ಇಲ್ಲ. ತನ್ನ ಧಾರ್ಮಿಕ ನಂಬಿಕೆಯನ್ನು ಹೊಂದಿರಲು, ಆಚರಿಸಲು ಹಾಗೂ ಪ್ರಚುರಪಡಿಸಲು ವ್ಯಕ್ತಿಯನ್ನು ಉತ್ತೇಜಿಸುವುದೇ ನಿಜವಾದ ಧರ್ಮನಿರಪೇಕ್ಷತೆ ಅಲ್ಲ ಎಂಬುದನ್ನು ಮನಗಾಣಬೇಕಾಗಿದೆ. ಅಥವಾ ಜನಸಮೂಹದ ಮೇಲೆ ಧರ್ಮದ ಪ್ರಭಾವವನ್ನು ವಿಸ್ತರಿಸುವ ಸಲುವಾಗಿ ಪ್ರತಿಯೊಂದು ಧಾರ್ಮಿಕ ನಂಬಿಕೆಗೂ ರಾಜ್ಯ ಪೋಷಣೆ ನೀಡುವುದು ಪೂರ್ವಸಿದ್ಧವೆಂದು ಅದು ಸೂಚಿಸುವುದಿಲ್ಲ. ನಿರ್ದಿಷ್ಟ ನಂಬಿಕೆಯನ್ನು ಪ್ರತಿಪಾದಿಸುವ ಒಂದು ನಿಗದಿತ ಕೋಮಿಗೆ ಕೇವಲ ಧಾರ್ಮಿಕ ಪರಿಗಣನೆಯ ಮೇಲೆ ವಿಶೇಷ ಸವಲತ್ತುಗಳನ್ನು ನೀಡುವುದರ ಮೂಲಕ ಆ ಕೋಮಿಗೆ ಅವಶ್ಯಕತೆಗಿಂತ ಹೆಚ್ಚಿನ ಬೆಲೆಕಟ್ಟಲು ಅದು ಉದ್ದೇಶಿಸುವುದೂ ಇಲ್ಲ. ಒಂದು ನಿಜವಾದ ಧರ್ಮಾತೀತ ರಾಜ್ಯವು ಧರ್ಮವನ್ನು ತನ್ನ ನಾಗರಿಕರ ಖಾಸಗಿ ವಿಷಯವೆಂದು ಪರಿಗಣಿಸುತ್ತದೆ ಹಾಗೂ ಅದರಿಂದಾಗಿಯೇ ವ್ಯಕ್ತಿಯೊಬ್ಬನಿಂದ ಧರ್ಮದ ಪಾಲನೆ, ಆಚರಣೆ ಮತ್ತು ಪ್ರಚಾರಗಳಲ್ಲಿ – ಅವುಗಳನ್ನು ಉತ್ತೇಜಿಸುವುದಾಗಲೀ ಇಲ್ಲವೇ ವಿರೋಧಿಸುವುದಾಗಲೀ ಮಧ್ಯಪ್ರವೇಶ ಮಾಡುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಅದು ಯಾವುದೇ

ನಂಬಿಕೆಯನ್ನು ಪಾಲಿಸಿಕೊಂಡಿರಲು ಆಸ್ತಿಕರಿಗೂ ಹಾಗೂ ನಾಸ್ತಿಕರಿಗೂ ಪೂರ್ಣ ಸ್ವಾತಂತ್ರ್ಯವನ್ನು ಖಾತರಿಪಡಿಸುತ್ತದೆ. ಸಾಮಾಜಿಕ–ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ಕಾರ್ಯಗತಗೊಳಿಸುವ ಮೂಲಕ ಅದು ಸಮಾಜವನ್ನು ಪ್ರಜಾತಾಂತ್ರೀಕರಣಗೊಳಿಸುತ್ತದೆ ಹಾಗೂ ವ್ಯಕ್ತಿಯ ಸಾಮಾಜಿಕ ಚಟುವಟಿಕೆಗಳಿಗೆ ಮತ್ತು ರಾಜ್ಯಕ್ಕೆ ಸಂಬಂಧಿಸಿದಂತೆ ಧರ್ಮ ಪ್ರಭಾವ ಬೀರದಂತೆ ಅದರ ಶಕ್ತಿಯನ್ನು ಉಡುಗಿಸುತ್ತದೆ. ನಮ್ಮ ದೇಶದ ಪ್ರಸಕ್ತ ಆಳುವ ಬೂರ್ಜ್ವಾಜಿಯು ಹೆಚ್ಚು ಹಿಂದೂ ಪುನರುತ್ಥಾನವಾದೀ ಪ್ರವೃತ್ತಿಗಳ ಪರಿಣಾಮವಾಗಿ ಇಂದಿಗೂ ಭಾರತೀಯ ಜನತೆಯು ಭಾಷೆ, ಧರ್ಮ ಜಾತಿ ಮತ್ತು ಜನಾಂಗಗಳಾಗಿ ವಿಭಾಗಗೊಂಡು, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಭಿನ್ನ ಕೋಮುಗಳ ಒಂದು ಕೂಟವಾಗಿ ಉಳಿದಿದೆ. ಊಳಿಗಮಾನ್ಯ ಪದ್ಧತಿ, ಊಳಿಗಮಾನ್ಯ ಅನೈಕ್ಯತೆ, ಚರ್ಚ್ ಮತ್ತು ರಾಜ್ಯದ ಮೇಲಿನ ಅದರ ಪ್ರಭಾವದ ವಿರುದ್ಧ, ಯಶಸ್ವಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಗಳ ನಿರ್ವಹಣೆಯಿಂದ ಸಮಾಜದ ಪ್ರಜಾತಾಂತ್ರೀಕರಣದ ಮೂಲಕ ಅಸ್ತಿತ್ವಕ್ಕೆ ಬಂದ ಪಶ್ಚಿಮದ ಆಧುನಿಕ ರಾಷ್ಟ್ರಗಳೂ ಸಹ ಧಾರ್ಮಿಕ ತತ್ವಾಂಧತೆ, ವರ್ಣಾಂಧತೆ ಮತ್ತು ವರ್ಣೀಯ ಗಲಭೆ (ಅಮೇರಿಕಾದಲ್ಲಿ ನಿಗ್ರೋಗಳ ಮೇಲಿನ ಕ್ರೌರ್ಯ, ಬ್ರಿಟನ್ನಿನಲ್ಲಿ ವರ್ಣೀಯ ಗಲಭೆಗಳು ಇದಕ್ಕೆ ದೃಷ್ಟಾಂತಗಳು)ಗಳಿಂದ ಸಂಪೂರ್ಣವಾಗಿ ಮುಕ್ತವಾಗಲಾಗಲಿಲ್ಲ ಎಂದ ಮೇಲೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು, ಸವರ್ಣೀಯ ಹಿಂದೂಗಳು, ಮುಸ್ಲಿಮರು, ಸಿಖ್ಖರು, ಜೈನರು ಮತ್ತು ಕ್ರಿಶ್ಚಿಯನ್ನರು, ಅಸ್ಸಾಮಿಗಳು, ಬಂಗಾಳಿಗಳು, ಓರಿಯಾಗಳು, ತಮಿಳರು ಮುಂತಾಗಿ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಭಾರತ ರಾಷ್ಟ್ರವು ವಿಭಜಿತವಾಗಿರುವಾಗ ನಮ್ಮ ದೇಶದಲ್ಲಿ ಕೋಮುವಾದ, ಜಾತೀಯತೆ ಮತ್ತು ಭಾಷಾಂಧತೆಗಳ ಮೂಲಗಳು ಎಷ್ಟು ಆಳವಾದ ಬೇರುಗಳನ್ನು ಉಳ್ಳದ್ದಾಗಿವೆ ಎಂಬುದನ್ನು ಸುಲಭವಾಗಿ ಊಹಿಸಬಹುದು. ಆದ್ದರಿಂದ ನಮ್ಮ ದೇಶದ ಕೋಮುವಾದಿ ಸಮಸ್ಯೆಯನ್ನು ಪರಿಹರಿಸುವ ಸರಿಯಾದ ಪ್ರಕ್ರಿಯೆಯು, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳನ್ನು ಪೂರ್ಣಗೊಳಿಸುವುದರ ಮೂಲಕ ಸಮಾಜವನ್ನು ಪ್ರಜಾತಾಂತ್ರೀಕರಣಗೊಳಿಸುವಲ್ಲಿ ಅಡಗಿದೆ.

ಉದಯಿಸುತ್ತಿರುವ ಬೂರ್ಜ್ವಾಜಿಯ ಊಳಿಗಮಾನ್ಯ ವಿರೋಧಿ ಕ್ರಾಂತಿಕಾರಿ ಹೋರಾಟದ ಗತಿಯಲ್ಲಿ ರಾಷ್ಟ್ರವು ರೂಪುಗೊಂಡು, ತತ್ಪರಿಣಾಮವಾಗಿ ಸಮಾಜವು ಪ್ರಜಾತಾಂತ್ರೀಕರಣವಾದಂತಹ ಪಾಶ್ಚಿಮಾತ್ಯ ಪ್ರಜಾತಂತ್ರಗಳಲ್ಲಿ ಕೂಡಾ ವರ್ಣೀಯ ಗಲಭೆಗಳು ಈಗಲೂ ಸಿಡಿಯುತ್ತಿರುವುದೇಕೆ ಎಂದು ನೀವು ನನ್ನನ್ನು ಪ್ರಶ್ನಿಸುವಿರಿ ಎಂದು ನನಗೆ ಗೊತ್ತು. ಆದರೆ ಕಾರಣ ಹುಡುಕಲು ದೂರ ಹೋಗಬೇಕಿಲ್ಲ. ಪಾಶ್ಚಾತ್ಯ ಪ್ರಜಾತಂತ್ರಗಳಲ್ಲಿ ಊಳಿಗಮಾನ್ಯ ಅನೈಕ್ಯತೆಗೆ ಸಂಬಂಧಿಸಿದಂತೆ ರಾಷ್ಟ್ರನಿರ್ಮಾಣ ಪ್ರಕ್ರಿಯೆ ಅವಶ್ಯಕವಾಗಿ ಪೂರ್ಣಗೊಂಡಿತು ಎಂಬುದೇನೋ ನಿಜ. ಆದ್ದರಿಂದಲೇ ಕೋಮು ಅಥವಾ ಧಾರ್ಮಿಕ ವ್ಯತ್ಯಾಸಗಳು ಅಲ್ಲಿನ ರಾಷ್ಟ್ರೀಯ ಜೀವನದ ಮೇಲೆ ಬೀರುವ ಪ್ರಭಾವ ಅತ್ಯಲ್ಪ ಅಥವಾ ಶೂನ್ಯ. ಆದರೆ ಬೂರ್ಜ್ವಾಜಿಯು ತಾನೇ ಆರಂಭಿಸಿದ ಪ್ರಜಾತಾಂತ್ರೀಕರಣದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅಸಮರ್ಥವಾಗಿದೆ. ಆದ್ದರಿಂದ

ಬೂರ್ಜ್ವಾ ಆಳ್ವಿಕೆಯಲ್ಲಿ ಪ್ರಜಾತಾಂತ್ರಿಕ ಕ್ರಾಂತಿಯ ಕೆಲವು ಕಾರ್ಯಗಳು ಇನ್ನೂ ಸಾಧಿಸಲಾಗದೇ ಉಳಿದಿರುತ್ತವೆ. ರಾಷ್ಟ್ರೀಯ ಪ್ರಶ್ನೆಯು ಇಂತಹ ಒಂದು ಸಾಧಿಸಲಾಗದಿರುವ ಕಾರ್ಯ. ಒಂದಕ್ಕಿಂತ ಹೆಚ್ಚು ರಾಷ್ಟ್ರೀಯತೆಗಳಿರುವ ಬಂಡವಾಳಶಾಹಿ ರಾಷ್ಟ್ರಗಳಲ್ಲೆಲ್ಲಾ ಪ್ರಬಲ ರಾಷ್ಟ್ರೀಯತೆಯು ಇತರ ರಾಷ್ಟ್ರೀಯತೆ ಅಥವಾ ರಾಷ್ಟ್ರೀಯತೆಗಳನ್ನು ತುಳಿಯುತ್ತದೆ. ಆದ್ದರಿಂದಲೇ ಬಂಡವಾಳವಾದದಡಿಯಲ್ಲಿ ಜನತೆ ಆರ್ಥಿಕ ಶೋಷಣೆಗೆ ಮಾತ್ರವಲ್ಲದೆ, ರಾಷ್ಟ್ರೀಯತೆಯ ದಬ್ಬಾಳಿಕೆಗೂ ಸಹ ಒಳಪಟ್ಟಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿನ ವರ್ಣೀಯ ಗಲಭೆಗಳು ಪ್ರಬಲ ರಾಷ್ಟ್ರೀಯತೆಯಿಂದ ಅಲ್ಪಸಂಖ್ಯಾತ ರಾಷ್ಟ್ರೀಯತೆಯು ಒಳಪಟ್ಟಿರುವ ಈ ತುಳಿತದ ಅಭಿವ್ಯಕ್ತತೆಗಳಾಗಿವೆ. ಅಲ್ಲದೆ ತನ್ನ ಬೆಳವಣಿಗೆಯ ಒಂದು ನಿಶ್ಚಿತ ಹಂತದಲ್ಲಿ ರಾಷ್ಟ್ರೀಯ ಸಮಗ್ರತೆ ಹಾಗೂ ರಾಷ್ಟ್ರ ನಿರ್ಮಾಣದ ಸಲುವಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿನ ವಿಭಿನ್ನ ಕೋಮುಗಳ ಜನತೆಯನ್ನು ಒಗ್ಗೂಡಿಸಲು ಪ್ರಯತ್ನಿಸಿದ ಬಂಡವಾಳವಾದವೇ, ತನ್ನ ಬೆಳವಣಿಗೆಯ ಇನ್ನೊಂದು ಹಂತದಲ್ಲಿ, ಅಂದರೆ, ಸಾಮ್ರಾಜ್ಯಶಾಹಿ ಹಂತದಲ್ಲಿ, ಜನತೆಯ ಸಿಡಿದೇಳುವಿಕೆಯ ವಿರುದ್ಧದ ತನ್ನ ಸುಭದ್ರತೆಗಾಗಿ ಜನತೆಯ ಐಕ್ಯತೆಯನ್ನು ಮುರಿಯಲೂ ಸಹ ಪ್ರಯತ್ನಿಸುತ್ತದೆ. ಅದರ ಬಿಕ್ಕಟ್ಟು ತೀವ್ರತರವಾದಂತೆ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧದ ದುಡಿಯುವ ಜನತೆಯ ಹೋರಾಟ ತೀಕ್ಷ್ಣಗೊಳ್ಳುತ್ತಾ ಹೋಗುತ್ತದೆ. ಆಗ, ಬಂಡವಾಳವಾದದ ವಿರುದ್ಧದ ಜನತೆಯ ಹೋರಾಟವನ್ನು ದಿಕ್ಚ್ಯುತಗೊಳಿಸಲು ಜನತೆಯ ಧಾರ್ಮಿಕ ಅಥವಾ ವರ್ಣೀಯ ಭಾವನೆಗಳನ್ನು ಉದ್ರೇಕಿಸಲು ಪ್ರಯತ್ನಿಸಿದಾಗ ಬಂಡವಾಳವಾದ ಹೆಚ್ಚು ಫ್ಯಾಸೀವಾದಿಯಾಗುತ್ತದೆ. ಈ ಕಾರಣಕ್ಕಾಗಿಯೇ ಪಶ್ಚಿಮದ ಬೂರ್ಜ್ವಾ ಪ್ರಜಾತಾಂತ್ರಿಕ ದೇಶಗಳಲ್ಲಿಯೂ ಸಹ ಧಾರ್ಮಿಕ ತತ್ವಾಂಧತೆ, ವರ್ಣೀಯತೆ ಮತ್ತು ವರ್ಣಗಲಭೆಗಳ ಬಹಿರಂಗ ಲಕ್ಷಣಗಳನ್ನು ನಾವು ಹೆಚ್ಚು ಹೆಚ್ಚಾಗಿ ಗಮನಿಸುತ್ತಿದ್ದೇವೆ. ಆದ್ದರಿಂದ ಎಲ್ಲಿಯವರೆಗೆ ಬಂಡವಾಳವಾದ ಅಸ್ತಿತ್ವದಲ್ಲಿರುತ್ತದೆಯೋ ಅಲ್ಲಿಯವರೆಗೆ ಕೋಮುವಾದ, ಜಾತಿವಾದ, ಜನಾಂಗೀಯತೆ ಮುಂತಾದವುಗಳಂತಹ ಜನವಿರೋಧಿ ವಿಚಾರಗಳ ಮೂಲ ಕಾರಣಗಳೂ ಇದ್ದೇ ಇರುತ್ತವೆ ಹಾಗೂ ತತ್ಪರಿಣಾಮವಾಗಿ ಕೋಮುವಾದಿ ಹಿಂಸಾಚಾರಕ್ಕೆ ಅವಕಾಶ ಸಹ ಉಳಿಯುತ್ತದೆ. ಸಮಾಜವಾದವನ್ನು ಯಶಸ್ವಿಯಾಗಿ ನಿರ್ಮಿಸುವುದಕ್ಕಾಗಿ ಕಾರ್ಮಿಕವರ್ಗದ ನೇತೃತ್ವದಲ್ಲಿ ದುಡಿಯುವ ಜನತೆ ಎಂದು ಅಧಿಕಾರವನ್ನು ವಶಪಡಿಸಿಕೊಂಡು, ಬಂಡವಾಳವಾದದ ಅವಶೇಷಗಳನ್ನು ನಿರ್ಮೂಲನಗೊಳಿಸುತ್ತದೋ ಮತ್ತು ಪ್ರಜಾತಾಂತ್ರಿಕ ಕ್ರಾಂತಿಯ ಕಾರ್ಯಗಳನ್ನು ಪೂರ್ಣಗೊಳಿಸುತ್ತದೋ ಆಗ ಮಾತ್ರ ರಾಷ್ಟ್ರೀಯ, ಕೋಮು ಅಥವಾ ವರ್ಣೀಯ ಸಮಸ್ಯೆ ತನ್ನ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುತ್ತದೆ. ನಮ್ಮ ದೇಶದಲ್ಲಿ ಯಾರು ಕೋಮುವಾದವನ್ನು ಹಾಗೂ ಕೋಮುವಾದಿ ಗಲಭೆಗಳನ್ನು ನಿರ್ಮೂಲನಗೊಳಿಸಲು ನಿಜವಾಗಿಯೂ ಇಚ್ಛಿಸುತ್ತಾರೋ, ಅವರು ಇತಿಹಾಸದ ಈ ಪಾಠವನ್ನು ಮನದಲ್ಲಿಟ್ಟುಕೊಳ್ಳಬೇಕು ಮತ್ತು ಬಂಡವಾಳವಾದವನ್ನು ಕಿತ್ತೊಗೆದು ಸಮಾಜವಾದವನ್ನು ಸ್ಥಾಪಿಸುವ ಅನಿವಾರ್ಯ ಕಾರ್ಯದಲ್ಲಿ ನಿರತರಾಗಲೇಬೇಕು.

ಹಾಗಾದರೆ ನಮ್ಮ ಜನತೆ ಅಧಿಕಾರ ವಶಪಡಿಸಿಕೊಂಡು ಕೋಮುವಾದವನ್ನು ನಿರ್ಮೂಲನೆಗೊಳಿಸುವವರೆಗೂ ನಾವು ಕೈಕಟ್ಟಿ ಕುಳಿತು ಕಾಯುತ್ತಿರಬೇಕೆ? ಇಲ್ಲ. ಅದು ಮೂರ್ಖತನದ ಪರಮಾವಧಿಯಾದೀತು. ಭಾರತವು ಒಂದು ಬಂಡವಾಳಶಾಹಿ ದೇಶವಾದ್ದರಿಂದ ಹಾಗೂ ಬಂಡವಾಳವಾದವು ಕೋಮುವಾದ, ಜಾತಿವಾದ ಮುಂತಾದ ಜನವಿರೋಧಿ ವಿಚಾರಗಳನ್ನು ಹುಟ್ಟು ಹಾಕಿ, ಪೋಷಿಸುತ್ತಿರುವುದರಿಂದ ಹಾಗೂ ಅದರಿಂದಾಗಿಯೇ ಕೋಮುವಾದಿ ಅಥವಾ ವರ್ಣೀಯ ಗಲಭೆಗಳ ನೆಲಗಟ್ಟು ಜೀವಂತವಾಗಿರುವುದರಿಂದ ನಮ್ಮ ದೇಶದಲ್ಲಿ ಕಾಲಕಾಲಕ್ಕೆ ಕೋಮು ಅಥವಾ ವರ್ಣೀಯ ಹಿಂಸಾಚಾರ ಖಂಡಿತವಾಗಿ ನಡೆಯುತ್ತದೆ ಎಂದು ವಾದಿಸುವುದು ವಿಧಿವಾದಕ್ಕೆ ಶರಣು ಹೋದಂತಾಗುತ್ತದೆ. ಕೋಮುವಾದದ ಮೂಲ ಬೇರುಗಳು ಇರುವುದು ನಮ್ಮ ದೇಶದ ಪ್ರಸಕ್ತ ಸಾಮಾಜಿಕ–ಆರ್ಥಿಕ ರಚನೆಯಲ್ಲಿಯೇ ಎಂಬುದರಲ್ಲಿ ಯಾವ ಸಂದೇಹವು ಇಲ್ಲ. ಆದರೆ ಕೇವಲ ಕಾರಣದ ಉಪಸ್ಥಿತಿಯೇ, ಎಲ್ಲ ಪರಿಸ್ಥಿತಿಗಳಲ್ಲೂ ಅದರ ಪರಿಣಾಮಕ್ಕೆ ತಂತಾನೆ ಎಡೆಮಾಡಿಕೊಡುವುದಿಲ್ಲ. ಕಾರಣವನ್ನು ಅನ್ವೇಷಿಸುವ ಮತ್ತು ಅಂತಿಮವಾಗಿ ಆ ಕಾರಣವನ್ನು ನಿರ್ಮೂಲನಗೊಳಿಸುವ ಶಕ್ತಿಯನ್ನು ಬಲಪಡಿಸುವುದರ ಮೂಲಕ ಮಾನವನು ಪರಿಣಾಮವನ್ನು ನಿರ್ಬಂಧಿಸಲೂಬಹುದು ಹಾಗೂ ತಾತ್ಕಾಲಿಕವಾಗಿ ತಡೆಯಲೂಬಹುದು ಸಹ. ಆದ್ದರಿಂದ ನಮ್ಮ ದೇಶದಲ್ಲಿ ಕೋಮುವಾದದ ಪ್ರತಿಶಕ್ತಿ ಆಗಿರುವ ಪ್ರಜಾತಾಂತ್ರಿಕ ಚಳುವಳಿಯನ್ನು ಸತತವಾಗಿ ಬಲಪಡಿಸುವ ಮೂಲಕ ಮಾತ್ರವೇ ನಾವು ಕೋಮುವಾದವನ್ನು ನಿರ್ಬಂಧಿಸಬಹುದು ಹಾಗೂ ಕೋಮುವಾದಿ ಹಿಂಸೆಯನ್ನು ತಾತ್ಕಾಲಿಕವಾಗಿ ತಡೆಯಬಹುದು.

ಆದರೆ ನಮ್ಮ ದೇಶದಲ್ಲಿ ಪ್ರಜಾತಾಂತ್ರಿಕ ಶಕ್ತಿಗಳು ಈವರೆಗೆ ನಡೆಸಿದ ಪ್ರಜಾತಾಂತ್ರಿಕ ಚಳುವಳಿಗಳು ಕೇವಲ ರಾಜಕೀಯ ಮತ್ತು ಆರ್ಥಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಚಳುವಳಿಗಳಿಗೆ ಮಾತ್ರ ಸೀಮಿತವಾಗಿವೆ ಎಂಬುದನ್ನು ಅಲ್ಲಗಳೆಯಲಾಗದು. ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ಎಂದೂ ನಮ್ಮ ದೇಶದ ಪ್ರಜಾತಾಂತ್ರಿಕ ಚಳುವಳಿಗಳ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಿರಲಿಲ್ಲ. ಇಂತಹ ಅಪೂರ್ಣ ಕಾರ್ಯಕ್ರಮವು ಉಪಯೋಗವಿಲ್ಲದ್ದು. ಆದ್ದರಿಂದ ಪ್ರಜಾತಾಂತ್ರಿಕ ಚಳುವಳಿಯ ಕಾರ್ಯಕ್ರಮವು ಹಿಂದಿನಂತೆ ಕೇವಲ ಆರ್ಥಿಕ ಮತ್ತು ರಾಜಕೀಯ ಬೇಡಿಕೆಗಳೊಂದಿಗೆ ತನ್ನನ್ನೇ ನಿಶ್ಶೇಷಗೊಳಿಸಿಕೊಳ್ಳಬಾರದು. ಅದು ನಮ್ಮ ದೇಶದಲ್ಲಿ ಇಂದಿಗೂ ಕೈಗೂಡದೆ ಉಳಿದಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ಒಳಗೂಡಿಸಿಕೊಳ್ಳಲೇಬೇಕು. ಈ ಕಾರ್ಯಗಳನ್ನು ಪೂರ್ತಿಗೊಳಿಸದಿದ್ದರೆ ಹಾಗೂ ನಮ್ಮ ಜನತೆಯನ್ನು ಸಾಮಾಜಿಕ ಮತ್ತು ಧಾರ್ಮಿಕ ಪೂರ್ವಾಗ್ರಹ, ಸಂಪ್ರದಾಯ ಮತ್ತು ಸಂಸ್ಥೆಗಳ ಶೃಂಖಲೆಗಳಿಂದ ಮುಕ್ತಗೊಳಿಸದಿದ್ದರೆ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅವರನ್ನು ಬೇರ್ಪಡಿಸುತ್ತಿರುವ ಕೋಟೆಯನ್ನು ನುಚ್ಚುನೂರುಗೊಳಿಸಿ ರಾಜಕೀಯವಾಗಿ ಮಾತ್ರವಲ್ಲದೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಸಹ ಸಾಮರಸ್ಯಪೂರಿತ ಭದ್ರ ಸಮೂಹವನ್ನಾಗಿ

ಅವರನ್ನು ಪರಿವರ್ತಿಸದಿದ್ದರೆ, ಕೋಮುವಾದವನ್ನು ವಾಸ್ತವದಲ್ಲಿ ನಿವಾರಿಸಲಾಗುವುದಿಲ್ಲ. ಇದು ಧರ್ಮದ ವಿರುದ್ಧ ನಿರ್ದೇಶಿಸಲ್ಪಟ್ಟ ಚಳುವಳಿಯೇನೂ ಅಲ್ಲ ಎಂಬುದನ್ನು ಮತ್ತೆ ಒತ್ತಿ ಹೇಳಲು ನಾನು ಇಚ್ಛಿಸುತ್ತೇನೆ. ಬದಲಿಗೆ ಈ ಚಳುವಳಿಯು ಆಸ್ತಿಕರು ಹಾಗೂ ನಾಸ್ತಿಕರಿಬ್ಬರ ಸಮಾನತೆ ಮತ್ತು ಸ್ವಾತಂತ್ರ್ಯಗಳ ಮೇಲೆ ತನ್ನನ್ನು ಆಧರಿಸಿಕೊಂಡಿದೆ. ಧರ್ಮವು ನಿಶ್ಚಿತವಾಗಿಯೂ ಅಸ್ತಿತ್ವದಲ್ಲಿರುತ್ತದೆ,ಆದರೆ ರಾಜ್ಯದ ವ್ಯವಹಾರಗಳ ಜೊತೆ ಯಾವುದೇ ಸಂಬಂಧವನ್ನು ಹೊಂದದೆ ಹಾಗೂ ವ್ಯಕ್ತಿಯ ಸಾಮಾಜಿಕ ಚಟುವಟಿಕೆಗಳ ಮೇಲೆ ಯಾವುದೇ ಪ್ರಭಾವ ಬೀರದೆ, ಅದು ವ್ಯಕ್ತಿಯ ಖಾಸಗಿ ವ್ಯವಹಾರ ಮಾತ್ರವಾಗಿರುತ್ತದೆ. ಹೀಗೆ ಚಳುವಳಿಯು ಧರ್ಮವನ್ನು ಅದರ ಸೂಕ್ತ ಸ್ಥಾನದಲ್ಲಿರಿಸುವ ಗುರಿಯುಳ್ಳದ್ದಾಗಿದೆ. ಒಂದು ವೇಳೆ ಧರ್ಮದ ಅಸ್ತಿತ್ವವು ಮುಂದುವರಿದುದೇ ಆದರೆ, ಅದು ವ್ಯಕ್ತಿಯ ಸಾಮಾಜಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರಿಯೇ ಬೀರುತ್ತದೆ ಎಂದು ವಾದಿಸಬಹುದು. ನನಗೆ ಈ ಶಂಕೆಗೆ ಯಾವುದೇ ಸ್ಥಿರವಾದ ಆಧಾರವಿದೆ ಎನಿಸುವುದಿಲ್ಲ. ನನ್ನ ಅಭಿಪ್ರಾಯದಲ್ಲಿ, ಈ ಶಂಕೆಯು ಧರ್ಮದ ಹಾಗೂ ಧಾರ್ಮಿಕ ಅಥವಾ ಸಾಮಾಜಿಕ ರೂಢಿಗಳ ನಡುವಣದ ಗೊಂದಲದಿಂದಾಗಿ ಉದ್ಭವಿಸುತ್ತದೆ. ಧರ್ಮ ಹಾಗೂ ಧಾರ್ಮಿಕ ರೂಢಿಗಳು ಎರಡು ಭಿನ್ನ ವಿಷಯಗಳಾಗಿವೆ. ಬದಲಾದ ಸಾಮಾಜಿಕ ಪರಿಸ್ಥಿತಿಗಳೊಂದಿಗೆ ಹೊಂದಿಕೊಳ್ಳುವುದಕ್ಕಾಗಿ ರೂಢಿಗಳು ಹಿಂದೆ ಬದಲಾಗಿವೆ ಮತ್ತು ಭವಿಷ್ಯದಲ್ಲಿಯೂ ಸಹ ಬದಲಾಗುತ್ತವೆ. ಆದ್ದರಿಂದ ಅಸ್ತಿತ್ವದಲ್ಲಿರುವ ಧಾರ್ಮಿಕ ಆಚರಣೆಗಳ ಬದಲಾವಣೆಗಾಗಿ ಹೋರಾಡುವ ಯಾರೊಬ್ಬರನ್ನೂ ಧರ್ಮವನ್ನು ದ್ವೇಷಿಸುತ್ತಿದ್ದಾರೆಂದಾಗಲಿ ಅಥವಾ ತ್ಯಜಿಸಿದ್ದಾರೆಂದಾಗಲೀ ಆರೋಪಿಸಲಾಗದು. ಓರ್ವ ನೈಜ ಮುಸ್ಲಿಮರಾಗಿದ್ದೂ ಸಹ ಕಮಲ್ ಅಟಾಟರ್ಕರವರು, ಟರ್ಕಿಯ ಪ್ರಜಾತಾಂತ್ರಿಕ ಪ್ರಗತಿಯನ್ನು ಕುಂಠಿತಗೊಳಿಸುತ್ತಿದ್ದ ಇಸ್ಲಾಮಿ ಧಾರ್ಮಿಕ ರೂಢಿಗಳ ವಿರುದ್ಧ ಹೋರಾಡಲಿಲ್ಲವೇ? ತನ್ನ ದೇಶದಲ್ಲಿ ಎಷ್ಟೋ ಇಸ್ಲಾಮಿ ಧಾರ್ಮಿಕ ರೂಢಿ ಹಾಗೂ ಸಂಸ್ಥೆಗಳನ್ನು ವಿನಾಶಗೊಳಿಸುತ್ತಿದ್ದರೂ ನಾಸರ್ ಓರ್ವ ಮುಸ್ಲಿಂ ಅಲ್ಲವೇ? ವಾಸ್ತವಿಕವಾಗಿ ಯಾವುದೇ ಇಸ್ಲಾಮಿ ಧಾರ್ಮಿಕ ರೂಢಿಗಳನ್ನೂ ಆಚರಿಸದೇ ಇದ್ದುದಕ್ಕಾಗಿ ಜಿನ್ನಾರನ್ನು ಓರ್ವ ಮುಸ್ಲಿಮೇತರ ಎಂದು ಯಾವುದೇ ಮುಸ್ಲಿಮರು ಹೇಳಬಲ್ಲರೇ? ಹಿಂದೂಗಳು ತಾವು ಹಿಂದೆ ಆಚರಿಸುತ್ತಿದ್ದ ಎಷ್ಟೋ ಧಾರ್ಮಿಕ ಆಚರಣೆಗಳನ್ನು ತ್ಯಜಿಸಿಲ್ಲವೇ? ಪ್ರಜಾತಾಂತ್ರಿಕ ಚಳುವಳಿಯು ಪ್ರಸಕ್ತ ಸಾಮಾಜಿಕ ಅವಶ್ಯಕತೆಗಳೊಂದಿಗೆ ಅಸಂಬದ್ಧವಾದ ಎಲ್ಲ ರೀತಿಯ ಧಾರ್ಮಿಕ ರೂಢಿಗಳ ವಿರುದ್ಧ ಖಂಡಿತವಾಗಿಯೂ ಅವಿರತ ಹೋರಾಟವನ್ನು ಹೂಡುತ್ತದೆ, ಆದರೆ ಧರ್ಮದ ವಿರುದ್ಧ ಅಲ್ಲ. ಭಾರತದ ಬೂರ್ಜ್ವಾಜಿಯು ನಮ್ಮ ದೇಶದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅಸಮರ್ಥವಾಗಿದೆ. ಓರ್ವ ವ್ಯಕ್ತಿಯು ಎಷ್ಟೇ ಮಹಾನ್ ಮತ್ತು ಪ್ರಭಾವಶಾಲಿಯಾಗಿದ್ದರೂ ಅವರ ವ್ಯಕ್ತಿಗತ ಪ್ರಯತ್ನಗಳ ಮೂಲಕವೂ ಈ ಕಾರ್ಯಗಳನ್ನು ನೆರವೇರಿಸಲಾಗುವುದಿಲ್ಲ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಈ ಕಾರ್ಯಗಳನ್ನು ನೆರವೇರಿಸುವ ಕರ್ತವ್ಯ ಭಾರತದ ಪ್ರಜಾತಾಂತ್ರಿಕ ಶಕ್ತಿಗಳ ಮೇಲಿದೆ. ಆದ್ದರಿಂದ ಪ್ರಜಾತಾಂತ್ರಿಕ ಸಮಾವೇಶವು

ನಮ್ಮ ದೇಶದಲ್ಲಿನ ವಿಶಾಲತರ ಪ್ರಜಾತಾಂತ್ರಿಕ ಶಕ್ತಿಗಳೊಡನೆ ತನ್ನನ್ನೇ ಸೇರ್ಪಡಿಸಿಕೊಳ್ಳಬೇಕು ಹಾಗೂ ರಾಜಕೀಯ ಮತ್ತು ಆರ್ಥಿಕ ಬೇಡಿಕೆಗಳ ಈಡೇರಿಕೆಗಾಗಿ ಪ್ರಜಾತಾಂತ್ರಿಕ ಶಕ್ತಿಗಳ ಹೋರಾಟದೊಂದಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳನ್ನು ನೆರವೇರಿಸುವ ತನ್ನ ಕಾರ್ಯಕ್ರಮಗಳನ್ನು ಹೆಣೆದುಕೊಳ್ಳಬೇಕು ಮಾತ್ರವಲ್ಲದೇ ಬಂಡವಾಳವಾದದಿಂದ ವಿಮುಕ್ತಿಗಾಗಿ ಹೋರಾಡುತ್ತಿರುವ ದುಡಿಯುವ ಜನತೆಯ ಮೇಲೂ ಸಹ ಅವಶ್ಯಕವಾಗಿ ಅವಲಂಬಿತವಾಗಬೇಕು. ಇಲ್ಲಿ ಅಲ್ಪಸಂಖ್ಯಾತ ಕೋಮಿನ ಸದಸ್ಯರ ಭದ್ರತೆಯು, ಭಯಪೀಡಿತರಾಗಿ ಮತ್ತು ಆಳುವ ಅಧಿಕಾರಸ್ಥರ ಪರವಾಗಿರುವುದರಲ್ಲಿಯೂ ಇಲ್ಲ ಎಂಬುದನ್ನು ಅರಿತುಕೊಳ್ಳಬೇಕು. ಸೂಕ್ತವಾದ ಕ್ರಾಂತಿಕಾರಿ ಕಾರ್ಮಿಕವರ್ಗದ ನಾಯಕತ್ವದಡಿಯಲ್ಲಿ ಪ್ರಜಾತಾಂತ್ರಿಕ ಚಳುವಳಿಯ ಶಕ್ತಿ ಮಾತ್ರವೇ ನಮ್ಮ ದೇಶದ ಅಲ್ಪಸಂಖ್ಯಾತ ಕೋಮಿನ ಸದಸ್ಯರ ರಕ್ಷಣೆ ಮತ್ತು ಭದ್ರತೆಯ ಏಕೈಕ ಖಾತರಿ. ಆದ್ದರಿಂದ ಅಲ್ಪಸಂಖ್ಯಾತ ಕೋಮಿನ ಸದಸ್ಯರನ್ನು ಆಳುವ ಬೂರ್ಜ್ವಾಜಿಯ ತೆಕ್ಕೆಯಿಂದ ಹೊರತರುವಂತಹ ಹಾಗೂ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ–ಜನತಾಂತ್ರಿಕ ಬೇಡಿಕೆಗಳಿಗಾಗಿ, ಪ್ರಸಕ್ತ ಪ್ರತಿಗಾಮಿ ಆಳ್ವಿಕೆಯ ವಿರುದ್ಧವಾಗಿ ಬಹುಸಂಖ್ಯಾತ ಕೋಮಿನ ಸದಸ್ಯರೊಡಗೂಡಿ ಹೋರಾಡಲು ಅವರಿಗೆ (ಅಲ್ಪಸಂಖ್ಯಾತರಿಗೆ) ಸಹಾಯ ಮಾಡುವಂಥ ಒಂದು ಕಾರ್ಯಕ್ರಮವನ್ನು 'ಪ್ರಜಾತಾಂತ್ರಿಕ ಸಮಾವೇಶ' ಕೈಗೊಳ್ಳಬೇಕು. ಬರಿಯ ಆಡಳಿತಾತ್ಮಕ ಕ್ರಮಗಳಿಂದ ಕೋಮುವಾದ ಹಾಗೂ ಕೋಮುಹಿಂಸೆಯನ್ನು ಕೊನೆಗಾಣಿಸುವ ವಿಚಾರವು ನಿರರ್ಥಕವಾದದ್ದು. ಏಕೆಂದರೆ, ನಮ್ಮ ದೇಶದ ಆಡಳಿತ ಯಂತ್ರವೇ ಸಾಮಾನ್ಯ ಪರಿಸ್ಥಿತಿಯಲ್ಲಿ ಸ್ವತಃ ಕೋಮುವಾದದಿಂದ ಸೋಂಕಿಗೊಳಗಾಗಿರುತ್ತದೆ ಹಾಗೂ ಕೋಮು ಪ್ರಕ್ಷುಬ್ಧತೆಯ ಸಂದರ್ಭದಲ್ಲಿ ಕಡು ಕೋಮುವಾದಿಯೇ ಆಗಿಬಿಡುತ್ತದೆ ಎಂಬ ವಿಷಯ ಯಾರಿಗೆ ತಿಳಿದಿಲ್ಲ? ಕೋಮು ಸಮಸ್ಯೆಯ ಪರಿಹಾರವನ್ನು ನಮ್ಮ ಜನತೆಯ ಅಂತರ್ಗತ ಮೌಲ್ಯಗಳಿಗೇ ಒಪ್ಪಿಸಿಬಿಡುವುದು ಅಷ್ಟೇ ನಿರರ್ಥಕವಾಗುತ್ತದೆ; ಇದರಿಂದ ನಮ್ಮ ಜನತೆಯಲ್ಲಿ ಸದ್ಭಾವನೆಯ ಕೊರತೆಯಿದೆಯೆಂದೇನೂ ಅಲ್ಲ. ಆದರೆ ಕೋಮು ಜ್ವರ ಉಲ್ಬಣಿಸಿದಾಗ ಅದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಎಲ್ಲಿಯವರೆಗೆ ಕೋಮುವಾದದ ಹುಟ್ಟಿನ ನೆಲೆಗಟ್ಟುಗಳನ್ನು ನಾಶಪಡಿಸಲಾಗುವುದಿಲ್ಲವೋ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಗಳ ಕಾರ್ಯಗಳು ಕೈಗೂಡಲಾಗದೆ ಉಳಿಯುತ್ತವೆ, ನಮ್ಮ ಸಮಾಜವು ಸಂಪೂರ್ಣವಾಗಿ ಪ್ರಜಾತಾಂತ್ರೀಕರಣಗೊಳ್ಳುವುದಿಲ್ಲವೋ ಹಾಗೂ ಧರ್ಮವು, ವ್ಯಕ್ತಿಯ ಸಾಮಾಜಿಕ ಚಟುವಟಿಕೆಗಳಲ್ಲಿ ಅತ್ಯಲ್ಪ ಅಥವಾ ಶೂನ್ಯ ಪ್ರಭಾವ ಬೀರುವ ಹಾಗೆ ವ್ಯಕ್ತಿಯ ಸಂಪೂರ್ಣ ಖಾಸಗಿ ವ್ಯವಹಾರದ ಸ್ಥಿತಿಗೆ ಸೇರಿಸಲ್ಪಡುವುದಿಲ್ಲವೋ ಅಲ್ಲಿಯವರೆಗೂ ಪರಿಸ್ಥಿತಿಯು ಹೀಗೆಯೇ ಉಳಿಯುತ್ತದೆ. ಆ ಸ್ಥಿತಿಯನ್ನು ತಲುಪಲು, ಏತನ್ಮಧ್ಯೆ ನಾನು ಈ ಕೆಳಗಿನ ಕಾರ್ಯಕ್ರಮಗಳನ್ನು ಸೂಚಿಸುತ್ತೇನೆ:

01. ಶೈಕ್ಷಣಿಕ ಸಂಸ್ಥೆಗಳನ್ನು ಎಲ್ಲಾ ರೀತಿಯ ಧಾರ್ಮಿಕ ಪ್ರಭಾವಗಳಿಂದ ಮುಕ್ತಗೊಳಿಸಬೇಕು.

02. ನೇರವಾಗಿ ರಾಜ್ಯದಿಂದ ಅಥವಾ ರಾಜ್ಯದ ಆಶ್ರಯದಲ್ಲಿ ನಡೆಸಲ್ಪಡುವ ಯಾವ ಸಮಾರಂಭಗಳಲ್ಲೂ ಯಾವುದೇ ಧಾರ್ಮಿಕ ರೂಢಿಗಳನ್ನು ಆಚರಿಸಬಾರದು.

03. ಅಂತರ ಜಾತೀಯ ಹಾಗೂ ಅಂತರ ಧರ್ಮೀಯ ವಿವಾಹಗಳನ್ನು ಪರಿಣಾಮಕಾರಿಯಾಗಿ ಉತ್ತೇಜಿಸಬೇಕು.

04. ಸಾಮಾಜಿಕ ಮತ್ತು ಧಾರ್ಮಿಕ ಸಮಾರಂಭಗಳಲ್ಲಿ ವಿಭಿನ್ನ ಕೋಮುಗಳ ಸಹಭಾಗಿತ್ವವನ್ನು ಕ್ರಿಯಾತ್ಮಕವಾಗಿ ಉತ್ತೇಜಿಸಬೇಕು.

05. ಕೋಮುವಾದಿ ಸಮಸ್ಯೆಯ ಕುರಿತು ಚರ್ಚಿಸಲು, ಅದನ್ನು ಪರಿಹರಿಸುವ ಮಾರ್ಗ, ವಿಧಾನಗಳನ್ನು ರೂಪಿಸುವ ಸಲುವಾಗಿ ವಿಭಿನ್ನ ವರ್ಗಗಳಿಗೆ ಸೇರಿದ ಸದಸ್ಯರ ಸಾರ್ವಜನಿಕ ಸಭೆ, ಗುಂಪು ಸಭೆ ಮುಂತಾದವುಗಳನ್ನು ಅಧಿಕ ಸಂಖ್ಯೆಯಲ್ಲಿ ಸಂಘಟಿಸಬೇಕು.

06. ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಕೋಮುವಾದವನ್ನು ಬೆಂಬಲಿಸುವಂತಹುಗಳನ್ನು ಹೊರತುಪಡಿಸಿ, ಕೋಮು ಪ್ರಶ್ನೆಗಳ ಕುರಿತಾದ ಎಲ್ಲಾ ಬರಹಗಳನ್ನು ಹೊಂದಿರುವ ನಿಯತಕಾಲಿಕೆಗಳನ್ನು ವಿವಿಧ ಭಾಷೆಗಳಲ್ಲಿ ಪ್ರಕಟಿಸಬೇಕು.

07. ಕೋಮುವಾದಿ ವಿರೋಧಿ ಚಳುವಳಿಯನ್ನು ನಡೆಸುವ ಸಲುವಾಗಿ ವಿಭಿನ್ನ ಕೋಮುಗಳ ಪ್ರತಿನಿಧಿಗಳಿರುವ 'ಜನತೆಯ ಸಮಿತಿ'ಗಳನ್ನು ಎಲ್ಲಾ ಮಟ್ಟಗಳಲ್ಲೂ ರಚಿಸಬೇಕು ಮತ್ತು ಜನತೆ ಈ ಚಳುವಳಿಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕಾಳಜಿ ವಹಿಸಬೇಕು.

08. ಯಾರು ಕೋಮುವಾದವನ್ನು ಉಪದೇಶಿಸುವರೋ ಇಲ್ಲವೆ ಆಚರಿಸುವರೋ ಅಥವಾ ಉಪದೇಶಿಸಲು ಇಲ್ಲವೇ ಆಚರಿಸಲು ಕಾರಣರಾಗಿರುವರೋ, ಅಂತಹವರ ವಿರುದ್ಧ, ಬಹಿಷ್ಕಾರವೂ ಸೇರಿದಂತೆ, ಸಾಮಾಜಿಕ ದಂಡನೆಯ ಶಿಕ್ಷೆಗಳನ್ನು ಕ್ರಿಯಾತ್ಮಕವಾಗಿ ಜಾರಿಗೊಳಿಸಬೇಕು.

ಸ್ನೇಹಿತರೇ, ಇನ್ನಿತರ ಕ್ರಮಗಳೂ ಸಹ ಇವೆ. ಆದರೆ ಸದ್ಯಕ್ಕೆ ನಾವು ಮೇಲಿನವುಗಳೊಂದಿಗೆ ಪ್ರಾರಂಭಿಸಬಹುದೆಂದು ನನ್ನ ಅನಿಸಿಕೆ. ಮುಕ್ತಾಯಕ್ಕೆ ಮುಂಚೆ ನನ್ನದೊಂದು ಮಾತು. ಕೋಮುವಾದ ಮತ್ತು ಕೋಮು ಹಿಂಸಾಚಾರ ಕಾಡುವ ಈ ಸಂಕೀರ್ಣ ಸಮಸ್ಯೆಯ ಪರಿಹಾರಕ್ಕೆ ಎಂದಿನಿಂದಲೂ ಸವೆಸಲ್ಪಟ್ಟ ದಾರಿಯನ್ನೇ ಅನುಸರಿಸುತ್ತಾ ಯಾವುದೇ ರೀತಿಯ ಕೊಡುಗೆಯನ್ನು ನೀಡದೆ ಇರುವ ಬದಲಿಗೆ ಅಲ್ಪ ಪ್ರಮಾಣದಲ್ಲಿಯೇ ಆದರೂ ಸರಿಯಾದ ದಾರಿಯಲ್ಲಿ ಪ್ರಾರಂಭವನ್ನು ಮಾಡಬೇಕೆಂದು ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಕೋಮುವಾದವನ್ನು ಎದುರಿಸುವ ಸಾಧನವಾಗಿ, ನಮ್ಮ ಜನತೆಯ ಸದ್ಭಾವನೆಯನ್ನು ಉತ್ತೇಜಿಸಲು ಹಾಗೂ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಲು ಮಾಡಿರುವ ಅಸ್ಪಷ್ಟವಾದ ಮಾನವತಾವಾದಿ ಮನವಿಗಳನ್ನು ನಾವು ಸಾಕಷ್ಟು ಕೇಳಿದ್ದೇವೆ. ಕೋಮು ಶಾಂತಿ ಮತ್ತು ಸೌಹಾರ್ದತೆಗಳನ್ನು ಸಾರುವ ಈ ಎರವಲು ಮಾತುಗಳು, ನಮ್ಮ ಜನರನ್ನು ಮುನ್ನಡೆಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಗಳ

ಮೂರ್ತ ಕಾರ್ಯಗಳಿಂದ ಬದಲಿಸಲ್ಪಡಲಿ. ಪ್ರಜಾತಾಂತ್ರಿಕ ಸಮಾವೇಶವು ಈ ಐತಿಹಾಸಿಕ ಕರ್ತವ್ಯಗಳನ್ನು ನೆರವೇರಿಸಲಿ. ಸ್ನೇಹಿತರೇ ಹಾಗೂ ಸೋದರ ಪ್ರತಿನಿಧಿಗಳೇ ನಿಮಗೆ ಧನ್ಯವಾದಗಳು.

ಸೋದರ ಭಾವದೊಂದಿಗೆ

**ಶಿವದಾಸ್ ಘೋಷ್**

ಪ್ರಧಾನ ಕಾರ್ಯದರ್ಶಿ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್)

48, ಧರ್ಮತಲ ರಸ್ತೆ,

ಕಲ್ಕತ್ತಾ – 13

15ನೇ ನವೆಂಬರ್, 1964